# ಅರುಣ್ ಜೋಳದಕೂಡ್ಲಿಗಿ ಅಂಕಣ

# ಕುಲುಮೆ ಜತೆಗಿನ ಬದುಕು



ಬೆಳಗ್ಗೆ ಐದು ಗಂಟೆಗಾಗಲೇ ಎದ್ದು, ಲ್ಯಾಪ್ ಟಾಪ್ ತೆರೆದು ಲೇಖನವೊಂದನ್ನು ಟೈಪ್ ಮಾಡುತ್ತಾ ಕುಳಿತಿದ್ದೆ. ಐದು ಮೂವತ್ತರ ಹೊತ್ತಿಗೆ ಜುರ್‍ರ್ರಾ... ಎನ್ನುವ ಸದ್ದು ಕೇಳತೊಡಗಿತು. ಆಗ ಎದ್ದವನೇ ಸದ್ದು ಬಂದ ಕಡೆಗೆ ನಡೆದೆ. ಅಲ್ಲಿ ಕಮ್ಮಾರ ಚಂದ್ರಪ್ಪ ಆಗಲೇ ಕುಲುಮೆ ಪೂಜೆ ಮಾಡಿ, ಕುಲುಮೆಯಲ್ಲಿ ಒಂದಷ್ಟು ಒಣ ಕಸ, ಚೂರುಪಾರು ಹಾಳೆ ಮುಂತಾದವನ್ನು ತುರುಕಿ ಬೆಂಕಿ ಕಡ್ಡಿ ಗೀರಿ, ಸುತ್ತಲೂ ಇದ್ದಿಲು ತುಂಬಿ.. ಮೆಲ್ಲಗೆ ಪಂಕವನ್ನು ತಿರುಗಿಸತೊಡಗಿದ್ದ. ಆಗ ಜುರ್‍ರ್ರಾ.. ಎನ್ನುವ ಸದ್ದು ಮಲ್ಲಗೆ ನೀರವ ಮೌನವನ್ನು ಸೀಳಿ ಎಳೆ- ಎಳೆಯಾಗಿ ಬರತೊಡಗಿತ್ತು. ಚಂದ್ರಪ್ಪನ ದಿನದ ಕಾಯಕ ಈ ಸದ್ದು ಸುಪ್ರಭಾತದೊಂದಿಗೆ ಆರಂಭವಾಗಿತ್ತು.

ನಾನು ಹೋದುದನ್ನು ನೋಡಿದ ಆತ 'ಓ ಬಾರಪ್ಪ, ನೀ ಯಾವಾಗ ಬಂದಿದ್ದೆ, ತಂಗಿ ಅರಾಮಿದಾಳ' ಎಂದು ಕುಶಲೋಪರಿಯನ್ನು ವಿಚಾರಿಸಿದರು. ನಾನು ಹೂಂ.. ಎಂದು ಕುಲುಮೆಯ ಪಕ್ಕ ಆತ ಬೆಂಕಿ ಹೊತ್ತಿಸುತ್ತಿದ್ದನ್ನು ನೋಡುತ್ತಾ ಕೂತೆ. ಸ್ವಲ್ಪ ಹೊತ್ತು ಆಗುತ್ತಿದ್ದಂತೆ ಭರಮಪ್ಪ ಒಂದೆರಡು ಕುಳ ತಂದ, ಪೂಜಾರ ಪಕ್ಕೀರಪ್ಪ ಕೊಡಲಿಯನ್ನು ಹಿಡಿದು ಅಣಿಯಲೆಂದು ತಂದ. ಹೀಗೆ ಒಬ್ಬೊಬ್ಬರು ನಿಧಾನಕ್ಕೆ ಸೇರುತ್ತಾ ಊರಿನ ಕುಶಲೋಪರಿಯ ಜತೆ ಕುಲುಮೆಗೆ ಜೀವಂತಿಕೆ ಬರತೊಡಗಿತು. ಕೆಲವರು ಕುಲುಮೆಯ ಬೆಂಕಿಯಲ್ಲಿ ಬೀಡಿ ಹಚ್ಚಿಕೊಂಡು ಹೊಗೆ ಬಿಡತೊಡಗಿದರು.

ಫಕ್ಕೀರಜ್ಜ 'ನನ್ನ ನೋಡುತ್ತಾ.. ಅರುಣಪ್ಪಾ.. ನಿನ್ನೆ ನಮ್ಮ ದೇಶ ಗೆಲ್ತಂತೆ ಅಲಾ.. ಟೀವ್ಯಾಗ ರಾತ್ರಿ ಹನ್ನೊಂದು ಗಂಟ್ಯಾಗ ಹೇಳಕತ್ತಿದ್ರು' ಎಂದು ಕೇಳಿದ. ನಾನು ಹೌದು ಎಂದು ತಲೆ ಅಲ್ಲಾಡಿಸಿದೆ (ಹಿಂದಿನ ದಿನ ರಾತ್ರಿ ವಿಶ್ವಕಪ್ ಕ್ರಿಕೆಟ್ ನಲ್ಲಿ ಭಾರತ ಆಸ್ಟ್ರೇಲಿಯಾದ ವಿರುದ್ಧ ಐದು ವಿಕೆಟ್ ಜಯ ಗಳಿಸಿತ್ತು). ಉಳಿದವರು ಏನೂ ಅರ್ಥವಾಗದಂತೆ, ಆ ವಿಷಯ ತಮಗೆ ಸಂಬಂಧಿಸಿದ್ದಲ್ಲ ಎನ್ನುವಂತೆ ನೋಡುತ್ತಿದ್ದರು. ತಕ್ಷಣ ಭರಮಪ್ಪ 'ಅಲ್ಲಪ್ಪಾ ಏನೋ ಪ್ರಳಯ ಆಗತತಿ ಅಂತ ಟೀವ್ಯಾಗ ಹೇಳತಿದ್ರಲ್ಲ ನಿಜ ಏನು?' ಎಂದು ಕೇಳಿದ. ಆಗ ಎಲ್ಲರ ಕಿವಿ ನನ್ನ ಬಳಿ ತಿರುಗಿದವು. ಎಲ್ಲರ ಆಸಕ್ತಿ ನಾನು ಏನು ಹೇಳುತ್ತಿದ್ದೇನೆ ಎನ್ನುವ ಕಡೆಗೇ ಇತ್ತು. ನಾನು ನಿಧಾನಕ್ಕೆ ಮಾತು ಆರಂಭಿಸಿ 'ವಿಜ್ಞಾನಿಗಳ ಪ್ರಕಾರ ನಮ್ಮ ಕಡೆ ಏನೂ ಆಗೊಲ್ಲ. ಅಂತ ಹೇಳ್ಯಾರ, ಸಮುದ್ರದ ಹತ್ರ ಇದ್ದವರಿಗೆ ಸುನಾಮಿ ಲಕ್ಷಣಗಳು ಕಾಣಿಸಿಕೊಳ್ಳಬಹುದು' ಅಂದೆ.

ಅದಕ್ಕೆ ಚಂದ್ರಪ್ಪ ತಕ್ಷಣ ಪ್ರತಿಕ್ರಿಯೆ ನೀಡಿ, 'ನಮಿಗೆ ಕುಡಿಯಾಕ ನೀರಿಲ್ಲ, ಇನ್ನ ನಮ್ಮನ್ನ ಮುಳುಗ್ಸಿ ಸಾಯ್ಸೋ ನೀರೆಲ್ಲಿಂದ ಬರ್ತಾತಿ ಬಿಡು' ಎಂದಾಗ ಎಲ್ಲರ ಮುಖದಲ್ಲಿ ಸಣ್ಣ ನಗು ಉಕ್ಕಿತು. ಆಗ ಚಂದ್ರಪ್ಪನ ಮಕ್ಕಳು ಮಲ್ಲೇಶ್, ಕಾಳಪ್ಪ ಬಂದರು. ಮಲ್ಲೇಶ್ ಬಂದವನೇ

ಅಪ್ಪನ ಕೆಲಸಕ್ಕೆ ಸಹಾಯಕನಾಗಿ ಕೆಲಸ ಮಾಡತೊಡಗಿದ. ನಾನು ಮಲ್ಲೇಶನ ಹತ್ತಿರ ಮಾತಿಗೆ ಕೂತೆ. ಕಾರಣ ಚಂದ್ರಪ್ಪನ ಕಿವಿ ಕೇಳುತ್ತಿಲ್ಲವಾದ್ದರಿಂದ ಆತನ ಜತೆ ಮಾತನಾಡಿ ಆತನಿಂದ ಉತ್ತರ ಪಡೆಯುವುದು ಕಷ್ಟವಾಗಿತ್ತು.



ಚಂದ್ರಪ್ಪ ಕಮ್ಮಾರಿಕೆ ಮತ್ತು ಬಡಿಗಿತನ ಎರಡನ್ನು ಮೂವತ್ತು ವರ್ಷಗಳಿಂದ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಜೋಳದಕೂಡ್ಲಿಗಿಯಲ್ಲಿ ಮಾಡುತ್ತಾ ಬಂದಿದ್ದಾನೆ. ಈಗ ಆತನೊಂದಿಗೆ ಆತನ ಇಬ್ಬರು ಮಕ್ಕಳೂ ಅದೇ ವೃತ್ತಿಯನ್ನು ಮುಂದುವರಿಸುತ್ತಿದ್ದಾರೆ. ಕಮ್ಮಾರಿಕೆ ಒಂದೇ ಜಾತಿಗೆ ಸೀಮಿತವಾದ ಉದ್ಯೋಗವಲ್ಲ. ಅದು ಹಲವಾರು ಜಾತಿ- ಧರ್ಮದವರನ್ನು ಒಳಗೊಂಡಿದೆ. ಹಾಗಾಗಿ ಒಂದೊಂದು ಊರಲ್ಲಿ ಬೇರೆ- ಬೇರೆಯ ಜಾತಿಯವರು ಕಮ್ಮಾರಿಕೆಯನ್ನು ಮಾಡುತ್ತಾ ಬರುತ್ತಿದ್ದಾರೆ. ಕಮ್ಮಾರಿಕೆಯನ್ನು ಆಧರಿಸಿದ ರೈತಾಪಿ ಕೆಲಸಗಳಲ್ಲಿ ಕಮ್ಮಾರಿಕೆಯನ್ನು ನಿಲ್ಲಿಸುವಂತಹ ತೀವ್ರ ಬದಲಾವಣೆಗಳೇನು ಸಂಭವಿಸಿಲ್ಲ. ಹಾಗಾಗಿ ಜಾನಪದ ವಿದ್ವಾಂಸರ ವೃತ್ತಿ ಕಸಬುಗಳು ಅವನತಿಯ ಹಾದಿ ತಲುಪಿವೆ ಎನ್ನುವ ಮಾತು ಸ್ವಲ್ಪ ಮಟ್ಟಿಗೆ ಹುಸಿ ಎನ್ನಿಸಿತು.

ಬಹುತೇಕ ವೃತ್ತಿ ಕಸಬಿನಿಂದ ಸಂಕಷ್ಟ ಅನುಭವಿಸಿದವರು ಸಹಜವಾಗಿ ತಮ್ಮ ಮಕ್ಕಳು ಅದೇ ವೃತ್ತಿಯಲ್ಲಿ ಮುಂದುವರಿಯಲು ಇಷ್ಟಪಡುವುದಿಲ್ಲ. ಆದರೆ, ಕಮ್ಮಾರ ಚಂದ್ರಪ್ಪ ಹೆಚ್ಚು ಓದದ ತನ್ನ ಮಕ್ಕಳನ್ನೂ ಕಮ್ಮಾರಿಕೆಯಲ್ಲಿಯೇ ಮುಂದುವರಿಯುವಂತೆ ತರಬೇತಿ ನೀಡುತ್ತಿದ್ದಾರೆ. ಚಂದ್ರಪ್ಪನದೇ ಮಾತಿನಲ್ಲಿ ಹೇಳುವುದಾದರೆ, 'ಹಿಂದಿನ ಕಾಲ್ದಾಗ ಹಗ್ಲು- ರಾತ್ರಿ ಕತ್ತಿ ಮಾಡಿದಂಗ ಮಾಡಿದ್ರು.. ಹೊಟ್ಟೆಗೆ ಬಟ್ಟೆಗೆ ಸಾಕಾಗ್ತಿರ್ಲಿಲ್ಲ.. ಈಗ್ಲೇ ವಾಸಿ. ದಿನ ಪೂರ್ತಿ ದುಡಿದ್ರೆ ಕಡಿಮೆ ಅಂದ್ರೂ ಆರುನೂರಾದ್ರೂ ಆಗ್ತಾತಿ.. ಈಗಿನ ದುಬಾರಿ ಕಾಲ್ದಾಗೂ ನಾವು ಅರಾಮಾಗಿದಿವಿ' ಎಂದರು. ಇದು ಹೇಗೆಂದು ಕೇಳುತ್ತಾ ಹೋದಂತೆ ಕಮ್ಮಾರಿಕೆಯ ಹೊಸ ಚಲನೆಗಳು ಕಾಣತೊಡಗಿದವು.

ಇಂದು ಗ್ರಾಮೀಣ ಭಾಗದಲ್ಲಿ ಕೃಷಿ ಕೆಲಸಕ್ಕೆ ಟ್ರ್ಯಾಕ್ಟರ್ ಮೇಲಿನ ಅವಲಂಬನೆ ಹೆಚ್ಚಾಗುತ್ತಿದೆ. ಟ್ರ್ಯಾಕ್ಟರ್ ಮಡಕೆ ಹೊಡೆಯಲು, ಹರಗಲು ಬಳಸುವ ಕುಳಗಳು ಮೊಂಡಾದಾಗ ಅವುಗಳನ್ನು ಹಣಿದು ಚೂಪು ಮಾಡಲು ಕಮ್ಮಾರರ ಹತ್ತಿರವೇ ಬರಬೇಕು. ಒಂದು ಟ್ರ್ಯಾಕ್ಟರ್ ಕುಳವನ್ನು ಹಣಿಯಲು ಕಮ್ಮಾರರು ಇನ್ನೂರ ಐವತ್ತು ರೂಪಾಯಿಯ ದರ ಮಾಡುತ್ತಾರೆ. ಅಂದರೆ ಹತ್ತಾರು ಎತ್ತಿನ ಮಡಕೆ ಕುಳ ಹಣಿಯುವುದರಿಂದ ಬರುವ ಹಣ ಒಂದು ಟ್ರ್ಯಾಕ್ಟರ್ ಮಡಕೆ ಅಣಿಯುವುದರಿಂದ ಬರುತ್ತದೆ. ಅಂದರೆ, ಅತ್ಯಾಧುನಿಕ ಯಂತ್ರವಾದ ಟ್ರ್ಯಾಕ್ಟರ್ ಕೂಡ ಕಮ್ಮಾರನ ಕುಲುಮೆಯನ್ನು ಆಶ್ರಯಿಸಿರುವುದು ಇದರಿಂದ ತಿಳಿಯುತ್ತದೆ. ಹೀಗೆ ಆಧುನಿಕ ಎನ್ನುವ ಪರಿಕರಗಳು ಕುಲುಮೆಗೆ ಬರತೊಡಗಿರುವುದರಿಂದ ಅದರ ಆದಾಯವೂ ಹೆಚ್ಚಿದೆ.

ಹೀಗೆ ಸಾಂಪ್ರದಾಯಿಕ ವೃತ್ತಿ ಕಸಬುಗಳ ಹೊಸ ಚಲನೆಯನ್ನು ನೋಡುತ್ತಾ ಹೋದರೆ, ಅದರ ಆದಾಯದ ಹೊಸ ಮೂಲಗಳು ಹುಟ್ಟಿಕೊಂಡಿರುವುದು ಕೂಡ ಗೋಚರಿಸುತ್ತದೆ.

ಚಂದ್ರಪ್ಪ ಹೇಳುವಂತೆ ನಗರದ ರೈತರೂ ಹಳ್ಳಿಗಳಿಗೆ ತಮ್ಮ ಸಾಮಾನುಗಳನ್ನು ಹಣಿಸಲು ಬರುತ್ತಾರಂತೆ. ಕಾರಣ ನಗರದ ಕುಲುಮೆಯವರು ಹೆಚ್ಚು ಹಣ ಪಡೆದು ಕಳಪೆ ಕೆಲಸ ಮಾಡುತ್ತಾರೆನ್ನುವುದು ಅವರ ನಿಲುವಂತೆ. ಹಳ್ಳಿಗಳ ಕುಲುಮೆಯವರು ಚೆನ್ನಾಗಿ ಹಣಿಯುತ್ತಾರೆ, ಚೆನ್ನಾಗಿ ನೀರು ಕುಡಿಸುತ್ತಾರೆ ಎನ್ನುವ ನಂಬಿಕೆ ಈಗಲೂ ಬಲವಾಗಿದೆ. ಇನ್ನು ನಗರದ ಕುಲುಮೆಯವರಿಗೆ ಹೋಲಿಸಿದರೆ

ಹಳ್ಳಿಗರ ಬೆಲೆ ಕೂಡ ಕಡಿಮೆಯೆ. ಹಾಗಾಗಿ ನಗರಿಗರು ಸಹಜವಾಗಿ ಆಕರ್ಶಿತರಾಗುತ್ತಾರೆ. ನಗರದ ಕುಲಮೆಗೆ ಹೋಗುವ ಹಳ್ಳಿಗರ ಸಂಖ್ಯೆ ಕೂಡ ಕಡಿಮೆ.

ಚಂದ್ರಪ್ಪ ಬದುಕಿನ ಆಸರೆಯಾದ ಕುಲುಮೆಯನ್ನು ದೇವರೆಂದೇ ನಂಬಿದ್ದಾರೆ. ತಮ್ಮ ಭಾವನೆಗಳನ್ನು ಕೆಲವು ನಂಬಿಕೆ ಆಚರಣೆಯ ಮೂಲಕ ವ್ಯಕ್ತಪಡಿಸುತ್ತಾರೆ. ನಿತ್ಯವೂ ಕುಲುಮೆಯಲ್ಲಿ ಬೆಂಕಿ ಹೊತ್ತಿಸುವ ಮೊದಲು ಸೂರ್ಯನಿಗೆ(ಪೂರ್ವದಿಕ್ಕಿಗೆ) ಪೂಜೆ ಮಾಡುತ್ತಾರೆ. ಅಮವಾಸ್ಯೆ, ಹುಣ್ಣಿಮೆಯ ದಿನ ವಿಶೇಷ ಪೂಜೆ ಮಾಡುತ್ತಾರೆ. ದಸರಾ ಹಬ್ಬದಲ್ಲಿ ಕಮ್ಮಾರಿಕೆಯ ಎಲ್ಲಾ ಪರಿಕರಗಳನ್ನು ಇಟ್ಟು ಆಯುಧ ಪೂಜೆ ಮಾಡುತ್ತಾರೆ. ಆಗ ಒಂದು ವಾರ ಕಾಲ ಕುಲುಮೆಯಲ್ಲಿ ಬೆಂಕಿ ಹೊತ್ತಿಸುವುದಿಲ್ಲ. ಇದೊಂದು ರೀತಿಯ ವಾರ್ಷಿಕ ರಜೆ. ಕುಲುಮೆಯಲ್ಲಿ ಚಾನು ಬಿದ್ದರೆ, ಕೈ ಕಾಲು ಸುಟ್ಟರೆ ಏನಾದರೂ ಅಪಶಕುನವಾಗಿದೆ ಎನ್ನುವ ನಂಬಿಕೆ ಇವರಿಗಿದೆ.



ಕರ್ನಾಟಕದಾದ್ಯಂತ ನಗರ ಹಳ್ಳಿಗಳಲ್ಲಿ ಕುಲುಮೆ ಕಸುಬನ್ನು ನಂಬಿದವರ ಸಂಖ್ಯೆ ದೊಡ್ಡದಿದೆ. ಅವುಗಳೆಲ್ಲವನ್ನೂ ಸರ್ವೆ ಮಾಡಿ, ಅವರ ಸದ್ಯದ ಚಲನೆಯನ್ನು ಗುರುತಿಸಿ, ಸರ್ಕಾರ ಅವರು ಬದಲಾವಣೆಗೆ ತೆರೆದುಕೊಳ್ಳುವಂತೆ ಅನುವು ಮಾಡುವ ಅಗತ್ಯವಿದೆ. ಕಾರಣ ಬಹುಪಾಲು ಕುಲುಮೆಯವರು ಇನ್ನೂ ಹಳೆಯ ವಿಧಾನಗಳನ್ನೇ ಅನುಸರಿಸುತ್ತಿದ್ದಾರೆ. ಹಾಗಾಗಿ ಸದ್ಯದ ಬದುಕು ಹೊಟ್ಟೆಗೂ ಬಟ್ಟೆಗೂ ಅನುಕೂಲವಾಗಿದೆಯಾದರೂ ಮಕ್ಕಳ ಶಿಕ್ಷಣ ಕೊಡಿಸಲು, ಕನಿಷ್ಟ ಸೌಲಭ್ಯಗಳನ್ನು ಹೊಂದಲು ಅವರನ್ನು ಆರ್ಥಿಕವಾಗಿ ಇನ್ನಷ್ಟು ಸಬಲರನ್ನಾಗಿಸುವ ಹೊಣೆ ಸರ್ಕಾರದ ಮೇಲಿದೆ.

ಒಂದೆಡೆ ಜನಸಾಮಾನ್ಯರ ಹೆಸರಲ್ಲಿ ಕೋಟಿ, ಕೋಟಿ ರೂಪಾಯಿ ಯೋಜನೆಗಳನ್ನು ಆರಂಭಿಸಿದರೂ ಆ ಹಣ ತಲುಪಬೇಕಾದವರಿಗೇ ತಲುಪದೆ ಪೋಲಾಗುವುದು ಸಾಮಾನ್ಯವಾಗುತ್ತಿದ್ದರೆ, ಇನ್ನೊಂದೆಡೆ ಚಂದ್ರಪ್ಪನಂತಹ ಕಮ್ಮಾರರು ಕುಲುಮೆ, ಪಂಕ, ಚಕ್ರ, ಅಡಿಗಲ್ಲು, ಸುತ್ತಿಗಿ, ಇಕ್ಕಳ, ನೀರಬಾನಿ, ಮಸಗಲ್ಲು, ಚಾನು ಮುಂತಾದ ಪರಿಕರಗಳೊಂದಿಗೆ ನಿತ್ಯವೂ ಒಡನಾಡುತ್ತಾ ಬದುಕಿಗೆ ಹೊಸ ಚೈತನ್ಯವನ್ನು ಪಡೆಯುತ್ತಿರುತ್ತಾರೆ.

# ಗಾಂಧಿವಾದಿ: ಯಜಮಾನ ಶಾಂತರುದ್ರಪ್ಪ



**ಬಳ್ಳಾರಿಯ ಯಜಮಾನರು**

ಯಜಮಾನ ಶಾಂತರುದ್ರಪ್ಪ ಬಳ್ಳಾರಿಯ ಚರಿತ್ರೆಯಲ್ಲಿ ಮರೆಯಲಾರದ ಹೆಸರು. 'ಯಜಮಾನ' ಎನ್ನುವ ಹೆಸರಲ್ಲೇ ಆಳುವ ಪ್ರಭುತ್ವದ ಸಂಕೇತವನ್ನು ಹೊಂದಿದ ಶಾಂತರುದ್ರಪ್ಪ, ಅದೇ ಆಳುವ ವರ್ಗದ ಬಗ್ಗೆ ಸದಾ ಕಿಡಿಕಾರುವ ವೈರುದ್ಧದ ವ್ಯಕ್ತಿತ್ವವನ್ನು ಹೊಂದಿದವರು. ಸದಾ ಗಾಂಧಿ ಟೋಪಿಯನ್ನು ಹಾಕಿ, ಖಾದಿ ಬಟ್ಟೆ ತೊಟ್ಟು, ಗಾಳಿಗೆ ಹಾರುವಂತಹ ಸಣಕಲು ದೇಹವನ್ನು ಹೊಂದಿದ್ದ ಶಾಂತರುದ್ರಪ್ಪ ಗಾಂಧಿ ಪ್ರಣೀತ ನೈತಿಕತೆಯ ಕಟ್ಟಾ ಅನುಯಾಯಿಗಳಾಗಿದ್ದರು. ಸದಾ ಹಣೆಗೆ ವಿಭೂತಿಯನ್ನು ಧರಿಸಿ ಲಿಂಗಾಯತ ಧರ್ಮದ ವಕ್ತಾರರಂತೆಯೂ ಕಾಣುತ್ತಿದ್ದರು.

ಯಜಮಾನರ ಬದುಕಲ್ಲಿ ಗಾಂಧಿ ಬದುಕಿನ ಕೆಲವು ಲಕ್ಷಣಗಳು ಕಾಣುತ್ತಿದ್ದವು. ಶಾಂತರುದ್ರಪ್ಪ ಸಮಾಜವಾದದ ತತ್ವ ಪ್ರಣಾಳಿಕೆಯ ಮೂಲಕ ಹೋರಾಟದ ಮನಸ್ಥಿತಿಯನ್ನು ಬೆಳೆಸಿಕೊಂಡವರಲ್ಲ. ಹಾಗಾಗಿ ನಾವು ಯಜಮಾನರನ್ನು ಸಮಾಜವಾದಿ ಎಂಬ ಚೌಕಟ್ಟಿನಲ್ಲಿ ಗಟ್ಟಿಯಾಗಿ ಕೂರಿಸುವುದೂ ಕಷ್ಟವೆ. ಬದಲಾಗಿ ಗಾಂಧಿ ಕಂಡ ಕನಸು ಸ್ವಾತಂತ್ರ್ಯಾನಂತರ ಭಾರತದಲ್ಲಿ ನನಸಾಗದಿರುವುದರಿಂದ ವಿಚಲಿತರಾಗುತ್ತಿದ್ದರು, ಅಂತೆಯೇ ಗಾಂಧಿ ತತ್ವದ ವಿರುದ್ಧದ ನಡೆ ಇರುವ ಸಂಗತಿಗಳನ್ನು ಮತ್ತು ಅಂತಹ ವ್ಯಕ್ತಿಗಳನ್ನು ತೀವ್ರವಾಗಿ ವಿರೋಧಿಸುತ್ತಿದ್ದರು ಕೂಡ. ತಮ್ಮ ಜೀವಿತಾವಧಿಯ ಬಹುಭಾಗವನ್ನು ಅವರು ಸಂಡೂರು ರಾಜರ ವಿರುದ್ಧ ಸೆಣಸಾಡಿದರು. ಅವರ ಇನ್ನಿತರ ಸಂಗತಿಗಳ ಬಗ್ಗೆ ಮಾಹಿತಿಯ ಕೊರತೆ ಇದೆ. ಹಾಗಾಗಿ ಸಂಡೂರು ರಾಜ ಮನೆತನದ ವಿರುದ್ಧ ಹೋರಾಡಿದ ಚಿತ್ರಣಗಳ ಮೂಲಕ ಯಜಮಾನರ ವ್ಯಕ್ತಿತ್ವವನ್ನು ಗ್ರಹಿಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

**ಪ್ರಜಾಪರಿಷತ್ತಿನ ಸ್ಥಾಪನೆ**

ಭಾರತದ ಒಕ್ಕೂಟದಲ್ಲಿ ಸೊಂಡೂರು ಸಂಸ್ಥಾನವನ್ನು ವಿಲೀನಗೊಳಿಸಲು ೧೯೪೮ರಲ್ಲಿ ಪ್ರಜಾಪರಿಷತ್ತು ಸ್ಥಾಪನೆಯಾಯಿತು. ಯಜಮಾನ ಶಾಂತರುದ್ರಪ್ಪನವರ ನಾಯಕತ್ವದಲ್ಲಿ ರಚನೆಯಾದ ಈ ಪ್ರಜಾಪರಿಷತ್ತಿನಲ್ಲಿ ಸ್ಥಳೀಯರು ಇದ್ದರು. ಮೈಸೂರು ರಾಜ್ಯಕ್ಕೆ ಸೊಂಡೂರನ್ನು ಸೇರಿಸುವುದು ಇದರ ಗುರಿ. ಅಂದಿನ ಕೇಂದ್ರ ಸರಕರ್ಾರದ ಗೃಹಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು ಭಾರತದ ೫೬೨ ಸಂಸ್ಥಾನಿಕರಿಗೂ ನೋಟೀಸು ಕೊಟ್ಟರು. ಕೇಂದ್ರ ಸರಕಾರದಲ್ಲಿ ವಿಲೀನಗೊಳ್ಳಬೇಕು ಇಲ್ಲವಾದಲ್ಲಿ ಸರಕಾರಿ ಪೊಲೀಸ್ ಪಡೆಯಿಂದ ವಶಪಡಿಸಿಕೊಳ್ಳಲಾಗುವುದು ಎಂದು ಅದರಲ್ಲಿತ್ತು. ಈ ನೋಟೀಸಿನ ಪರವಾಗಿ ಪ್ರಜಾ ಪರಿಷತ್ತಿನ ಅಧಿವೇಶನ ನಡೆಸಲು ತಯಾರಿ ಮಾಡಿದರು. ಆಗಲೂ ಕಾಂಗ್ರೆಸ್ ಕಾರ್ಯಕರ್ತರಿಗೂ, ಬಳ್ಳಾರಿಯ ಸೊಂಡೂರು ವಿಮೋಚನ ಸಮರ ಸಮಿತಿಯವರಿಗೂ ಮಹಾರಾಜರು ರಜಾಕಾರರ ಬೆದರಿಕೆ ಹಾಕಿದರು. ಆದರೂ ಯತ್ನಟ್ಟಿಯಲ್ಲಿ ಪರಿಷತ್ತಿನ ಮೊದಲ ಅಧಿವೇಶನ ನಡೆಯಿತು.

ರಾಜ್ಯದ ವಿವಿಧ ಭಾಗಗಳಿಂದ ಹೋರಾಟಗಾರರು ಈ ಅಧಿವೇಶನಕ್ಕೆ ಬಂದಿದ್ದರು. ಕೊಲ್ಲಾಪುರದ ರತ್ನಪ್ಪ ಕಂಬಾರ, ತಲ್ಲೂರು ರಾಮನಗೌಡ, ಶಾಂತಿನಾಥ ಇಂಗಳೆ, ಮಹದೇವಪ್ಪ ಪಟ್ಟಣ, ಶಾಂತರುದ್ರಪ್ಪ ಮುಂತಾದವರು ಭಾಗವಹಿಸಿದ್ದರು. ಸೊಂಡೂರು ಸಂಸ್ಥಾನವು ಭಾರತದಲ್ಲಿ ವಿಲೀನವಾಗಬೇಕು ಎಂಬುದು ನಿರ್ಣಯವಾಯಿತು. ಈ ಬೆಳವಣಿಗೆಯ ನಡುವೆಯೇ ಸರ್ದಾರ್ ವಲ್ಲಭಭಾಯಿ ಪಟೇಲರ ಕಠಿಣ ನೀತಿಗನುಗುಣವಾಗಿ ಸಂಸ್ಥಾನವು ಏಪ್ರಿಲ್ ೧.೧೯೪೯ರಂದು ಭಾರತದ ಗಣರಾಜ್ಯದಲ್ಲಿ ವಿಲೀನವಾಯಿತು. ಇದಕ್ಕೆ ಶ್ರಮಿಸಿದ ಇತರ ಹೋರಾಟಗಾರರೆಂದರೆ ಅಂಗಡಿ ಶರಭಯ್ಯ, ಉಳ್ಳಾಗಡ್ಡಿ ಕರಿಯಪ್ಪ, ಬಾವಿಕಟ್ಟೆ ಮರಿಬಸಪ್ಪ, ಕೃಷ್ಣನಗರದ ಎಲಿಗಾರ ತಿಮ್ಮಪ್ಪ, ಭುಜಂಗನಗರದ ಗುರುಶಾಂತಯ್ಯ, ಅರಳುಕಲ್ ಕುಮಾರಪ್ಪ, ನಾಗಲಾಪುರದ ಸಿದ್ಧರಾಮಯ್ಯ, ಕಾಲೆ ಸುಬ್ಬಣ್ಣ, ಬೋಜ ಅಡಿವೆಪ್ಪ, ಗಿರಿಮಲ್ಲಪ್ಪ ಮುಂತಾದವರು. ಇವರೆಲ್ಲಾ ಮಹಾರಾಜರ ಸೊಂಡೂರು 'ಸ್ಟೇಟ್ ಸೆಲ್'ನಲ್ಲಿ ಶಿಕ್ಷೆ ಅನುಭವಿಸಿದ್ದರು. ಜೈಲಿನಲ್ಲಿಯೇ ಅರಮನೆಯಿಂದ ಸರಬರಾಜಾಗುತ್ತಿದ್ದ ಆಹಾರವನ್ನು ಸೇವಿಸದೆ ಪ್ರತಿಭಟಿಸಿದ್ದರು. ಊರಿನ ಜನ ತರುತ್ತಿದ್ದ ಬುತ್ತಿಯನ್ನು ಊಟ ಮಾಡುತ್ತಿದ್ದರು.

**ಸೊಂಡೂರು ವಿಮೋಚನಾ ಸಮರ ಸಮಿತಿ**



ಸೊಂಡೂರಿನಲ್ಲಿ ಘೋರ್ಪಡೆಯವರ ರಾಜ ಮನೆತನದ ವಿರುದ್ಧ ಪ್ರತಿಭಟನೆಯ ಬೀಜ ಬಿತ್ತಿದ್ದು ಯಜಮಾನ ಶಾಂತರುದ್ರಪ್ಪ. ಇವರು ಬಳ್ಳಾರಿಯವರು. ವಿಠಲ ಪ್ರೆಸ್ ನಡೆಸಿಕೊಂಡು 'ಯಜಮಾನ್ ಅಂಡ್ ಬ್ರದರ್ಸ್' ಎನ್ನುವ ಪುಸ್ತಕದಂಗಡಿ ಇಟ್ಟುಕೊಂಡು ಇದ್ದವರು. ಬಳ್ಳಾರಿಗೆ ಆಂಧ್ರದ ರೈತ ಹೋರಾಟಗಳ ಪ್ರಭಾವವಿತ್ತು. ತೆಲಂಗಾಣ ಹೋರಾಟವು ಇಲ್ಲಿಯ ಬಹುತೇಕರನ್ನು ಪ್ರಭಾವಿಸಿತು. ಯಜಮಾನರೂ ಇದರಿಂದ ಪ್ರಭಾವಿತರಾದರು. ಬಳ್ಳಾರಿಯು ಹಲವು ಸಂಘರ್ಷ ಪ್ರತಿಭಟನೆಯ ತವರಿನಂತಿತ್ತು. ರಂಜಾನ್‌ಸಾಬ್, ಮಹಾಬಳೇಶ್ವರಪ್ಪ ಇಂತಹವರ ಗೆಳೆತನ ಯಜಮಾನರನ್ನು ಹೋರಾಟಗಾರರನ್ನಾಗಿ ಪ್ರಭಾವಿಸಿತು. ಇವರು ಕನ್ನಡ ಪುಸ್ತಕಗಳನ್ನು ತಲೆಮೇಲೆ ಹೊತ್ತು ಮಾರಾಟ ಮಾಡಿದ ಪುಸ್ತಕ ಪ್ರೇಮಿಯೂ ಹೌದು. ೪೦ರ ದಶಕದಲ್ಲಿಯೇ 'ಸೊಂಡೂರು ವಿಮೋಚನಾ ಸಮರ ಸಮಿತಿ'ಯನ್ನು ಹುಟ್ಟು ಹಾಕಿದರು. ಇದರ ಮೂಲಕ ಸೊಂಡೂರು ರಾಜರನ್ನು ವಿರೋದಿsಸಿ ಪ್ರತಿಭಟನೆಗಳನ್ನು ಪ್ರಾರಂಭಿಸಿದರು.

ಸೊಂಡೂರಿನ ಯಶವಂತರಾವ್ ಘೋರ್ಪಡೆ ಮೂಲವಂಶಜರಲ್ಲ, ಇವರು ಕುಮಾರಸ್ವಾಮಿಯ ದೇವಸ್ಥಾನದ ಮೂಲ ಟ್ರಸ್ಟಿ ರಾಜವಂಶ ಅಲ್ಲ ಎನ್ನುವುದೇ ಇವರ ಹೋರಾಟದ ಪ್ರಮುಖ ಧ್ಯೇಯಗಳಾಗಿದ್ದವು. ಕುಮಾರಸ್ವಾಮಿಯ ಪ್ರತಿ ಜಾತ್ರೆಗೂ ದರ್ಶನ ಕರ ವಿರೋಧಿ ಪ್ರತಿಭಟನೆ ಮಾಡುತ್ತಾ ಬಂದರು. ಮೂಲತಃ ಗಾಂಧೀವಾದಿಗಳಾದ ಇವರು ಹೋರಾಟವೆಂದರೆ ಕೋರ್ಟು, ಕಚೇರಿ, ಅರ್ಜಿಗಳ ಮೂಲಕ ಇತ್ಯರ್ಥ ಆಗಬೇಕು ಎಂದು ನಂಬಿದವರು. ಕರ್ನಾಟಕ ಏಕೀಕರಣದಲ್ಲಿಯೂ, ಬಳ್ಳಾರಿಯಲ್ಲಿ ಕನ್ನಡಪರ ಚಳವಳಿಯಲ್ಲಿಯೂ ಇವರದು ಮುಂಚೂಣಿ ನಾಯಕತ್ವ. ೧೯೭೩ರ ಸಂಡೂರು ಭೂ ಹೋರಾಟದಲ್ಲಿ ಚಳವಳಿಯುದ್ದಕ್ಕೂ ಇದ್ದರು. ಈವರೆಗಿನ ಅವರ ಒಂಟಿತನದ

ಹೋರಾಟಕ್ಕೆ ಒಂದು ಸಾಮೂಹಿಕ ಧ್ವನಿ ಬಂದಿತ್ತು. ಈ ರೈತ ಹೋರಾಟ ಆಗುವುದಕ್ಕೆ ಈ ಭಾಗದಲ್ಲಿ ಅವರು ಹುಟ್ಟು ಹಾಕಿದ ಹೋರಾಟದ ಪರಂಪರೆಯೂ ಕಾರಣವಾಯಿತು

**೧೯೬೬ರ ಸತ್ಯಾಗ್ರಹ**

ಯಶವಂತರಾವ್ ಘೋರ್ಪಡೆಯವರ ಆಡಳಿತ ಮತ್ತು ಸಂಪತ್ತಿನ ದುರುಪಯೋಗವನ್ನು ವಿರೋಧಿಸಲು ಯಜಮಾನರು ೧೯೬೬ರ ಸತ್ಯಾಗ್ರಹಕ್ಕೆ ಅಣಿಗೊಳಿಸಿದರು. ನವೆಂಬರ್ ೨೮.೧೯೬೬ರಂದು ನಡೆಯಲಿರುವ ಕುಮಾರಸ್ವಾಮಿ ಮಹಾಯಾತ್ರೆಯ ದಿನದಂದು ಸತ್ಯಾಗ್ರಹ ನಡೆಸಲು ನಿರ್ಧಾರವಾಯಿತು. ಸೊಂಡೂರು ವಿಮೋಚನಾ ಸಮರ ಸಮಿತಿಯ ಅಧ್ಯಕ್ಷರಾದ ಶಾಂತರುದ್ರಪ್ಪ ಕರಪತ್ರ ಹೊರಡಿಸಿದರು. ಈ ಸತ್ಯಾಗ್ರಹಕ್ಕೆ ಮೂರು ಮುಖ್ಯ ಕಾರಣಗಳಿದ್ದವು. ಒಂದು: ಸರ್ಕಾರದಿಂದ ವಾರ್ಷಿಕ ೩೬ ಸಾವಿರ ಪಡೆದರೂ ಮೊದಲಿನಿಂದ ನಡೆಯುತ್ತಿದ್ದ ಅನ್ನ ಸತ್ರವನ್ನು ಮುಚ್ಚಲಾಗಿದೆ. ಎರಡು: ಕುಮಾರಸ್ವಾಮಿ ದೇವಸ್ಥಾನ ಸಾರ್ವಜನಿಕವಾದದ್ದು ಇದನ್ನು ರಾಜರು ತಮ್ಮ ಧರ್ಮದರ್ಶಿತ್ವಕ್ಕೆ ವಶಪಡಿಸಿಕೊಂಡು ದೇವಸ್ಥಾನದ ಹಣ ಆಸ್ತಿಯನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಮೂರು: ಸಾರ್ವಜನಿಕ ಝುಂಡಾ ಹಾರಿಸುವ ಪದ್ಧತಿಯನ್ನು ರಾಜರೇ ನೆರವೇರಿಸುತ್ತಿದ್ದಾರೆ. ಒಟ್ಟಾರೆ ಸತ್ಯಾಗ್ರಹದ ಉದ್ದೇಶ ಕುಮಾರಸ್ವಾಮಿ ದೇವಸ್ಥಾನದ ಹಕ್ಕಿಗಾಗಿ ವಿಮೋಚನಾ ಹೋರಾಟವಾಗಿತ್ತು.

ಈ ಸತ್ಯಾಗ್ರಹದ ಮುನ್ನವೇ ಸಾಕಷ್ಟು ಪ್ರಚಾರ, ಕರಪತ್ರ ಹಂಚಿಕೆ, ಪತ್ರಿಕಾ ಪ್ರಕಟಣೆ ನಡೆಯಿತು. ತೆಲುಗು ಭಾಷೆಯಲ್ಲಿ ಪ್ರಕಟವಾದ ಕರಪತ್ರಗಳನ್ನು ಆಂಧ್ರದ ಕುಮಾರಸ್ವಾಮಿ ಭಕ್ತರಿಗೆ ಹಂಚಲಾಯಿತು. 'ಆಂದ್ರಪ್ರಭ' ತೆಲುಗು ಪತ್ರಿಕೆಯಲ್ಲಿಯೂ ಸತ್ಯಾಗ್ರಹದ ಸುದ್ದಿಯಾಯಿತು. ಮೊದಲ ಬಾರಿಗೆ ಶಾಂತರುದ್ರಪ್ಪನವರು ವೈಯಕ್ತಿಕ ಹೋರಾಟದ ಸೀಮಿತತೆಯನ್ನು ಮೀರಿ ಸಾಮೂಹಿಕ ಹೋರಾಟಕ್ಕೆ ಕರೆ ನೀಡಿದರು. ಇಷ್ಟೆಲ್ಲಾ ಆದರೂ ಈ ಸತ್ಯಾಗ್ರಹ ನಡೆದ ಬಗೆಗೆ ಯಾವುದೇ ಮಾಹಿತಿಯಿಲ್ಲ. ಲಕ್ಷೀಪುರದ ನಾಗಪ್ಪ 'ಸತ್ಯಾಗ್ರಹ ಆಗೋದಿಕ್ಕಿಂತ ಮುಂಚೆನೇ ಯಜಮಾನರನ್ನು ಬಂದಿsಸಲಾಯ್ತು. ಹಾಗಾಗಿ ನಡೀಲಿಲ್ಲ' ಎಂದು ಹೇಳುತ್ತಾರೆ. ಯಜಮಾನರ ಬಹುತೇಕ ಚಳವಳಿಗಳ ಮುಕ್ತಾಯ ಪೊಲೀಸರ ಬಂಧನವೇ ಆಗಿತ್ತು. ಮಹಾರಾಜರಿಗೂ ಇದು ಸುಲಭದ ವಿಧಾನ. ಸ್ವಾತಂತ್ರ್ಯ ಹೋರಾಟದ ಮಾದರಿಗಳಲ್ಲಿ ಚಳವಳಿ ಮಾಡುತ್ತಿದ್ದ ಯಜಮಾನರು ಅಹಿಂಸಾಮಾರ್ಗದಲ್ಲಿ ಬಲವಾದ ವಿಶ್ವಾಸವಿರಿಸಿದ್ದರು. ಈ ಮಂದಗಾಮಿತ್ವದಿಂದಾಗಿಯೇ ಯುವಕರು ಯಜಮಾನರೊಂದಿಗೆ ಹೆಚ್ಚಾಗಿ ಕೈ ಜೋಡಿಸಲಿಲ್ಲ.

**ಹಸಿದ ಮಾನವ ಹುಸಿ ನುಡಿದು ಹದಗೆಡಿಸಿದ...!**

ಶಾಂತರುದ್ರಪ್ಪನವರು ಬದುಕಿನ ಬಹುಭಾಗವನ್ನು ಸೊಂಡೂರಿನ ರಾಜಮನೆತನದ ವಿರುದ್ಧ ಹೋರಾಡುವುದರಲ್ಲೆ ಕಳೆದರು. ಅವರ ಹೋರಾಟದ ತೀವ್ರತೆಯನ್ನು ಸೊಂಡೂರು ಸಂಸ್ಥಾನದ ವಿರುದ್ಧವಾಗಿ ಹೊರಡಿಸುತ್ತಿದ್ದ ಕರಪತ್ರಗಳಲ್ಲಿ ಕಾಣಬಹುದಾಗಿತ್ತು. ಇದಕ್ಕಿಂತ ಮುಖ್ಯವಾಗಿ ಅವರೇ ಬರೆದ ಕಾದಂಬರಿ 'ಹಸಿದ ಮಾನವ ಹುಸಿ ನುಡಿದು ಹದಗೆಡಿಸಿದ ಸೊಂಡೂರ ನಾಡು' ಅಥವಾ 'ಸೊಂಡೂರಿನ ಮಾಜಿ ರಾಜ ಹಾಗೂ ಯುವರಾಜರ ಭಯಂಕರ ಒಳಸಂಚು' ಎಂಬ ಪತ್ತೇದಾರಿ ಕಾದಂಬರಿಯಲ್ಲಿ ಯಜಮಾನರ ಧಾರ್ಷ್ಟ್ಯ ನೇರವಂತಿಕೆಯನ್ನು ಗುರುತಿಸಬಹುದು. ಯಜಮಾನರೇ ಇದನ್ನೊಂದು ಕಾದಂಬರಿ ಎಂದಿದ್ದಾರೆ. ಆದರೆ ಕ್ರೈಮ್ ಪತ್ರಿಕೆಯ ರೋಚಕ ವರದಿಯಂತೆ ಇದೆ. ಇದು ಬಳ್ಳಾರಿ ಜಿಲ್ಲೆಯ ಚರಿತ್ರೆಯಲ್ಲಿ ಗಮನಿಸಬೇಕಾದ ಪಠ್ಯ. ಈ ಕಾದಂಬರಿ ರಾಜ್ಯಪತ್ರಗಾರ ಇಲಾಖೆಯು ಸಂಗ್ರಹಿಸಿದ ಯಜಮಾನ ಶಾಂತರುದ್ರಪ್ಪನವರ ವೈಯಕ್ತಿಕ ಸಂಗ್ರಹದಲ್ಲಿ ದೊರೆತಿದೆ.

ಒಂದು ಕಾಲದ ವಾಸ್ತವವನ್ನು ಸಾಮಾಜಿಕ ಕಳಕಳಿ ಇರುವವರು ಗ್ರಹಿಸುವಿಕೆಯ ಸ್ವರೂಪವನ್ನು ತಳಿಯಲು, ಆಳುವ ದೊರೆಯ ಎದುರು ಆತನ ತಪ್ಪುಗಳನ್ನು ಹೇಳಲಿಕ್ಕಾಗದೆ, ಹೇಳಿದರೂ ಅವುಗಳನ್ನು ತಿದ್ದಲಿಕ್ಕಾಗದ ಅಸಹಾಯಕ ಸ್ಥಿತಿ ಇರುವಾಗ ಒಂದು ಭಾಷೆ ಪಡೆಯುವ ಸ್ವರೂಪವನ್ನು ಅರಿಯಲು, ಸ್ವಾಂತಂತ್ರ್ಯ ಬಂದ ನಂತರದಲ್ಲಿ ನೈತಿಕತೆಯೇ ಬದುಕು ಎಂದುಕೊಂಡ ಜನರು ಮತ್ತು ನೈತಿಕತೆಯನ್ನು ಗಾಳಿಗೆ ತೂರುತ್ತಿದ್ದ ಶಕ್ತಿ ರಾಜಕಾರಣ, ಈ ಎರಡರ ನಡುವಿನ ಮುಖಾಮುಖಿ ಹೇಗಿತ್ತು ಎಂದು ತಿಳಿಯಲು ಈ ಕಾದಂಬರಿ ನೆರವಾಗುತ್ತದೆ. ಈ ಬರಹಕ್ಕೆ ವೈಯಕ್ತಿಕ ದ್ವೇಷದ ನೆಲೆಯೂ ಇದೆ. ಇಲ್ಲಿನ ಬರಹ ಸಿಟ್ಟು ಆಕ್ರೋಶ ಅಸಹಾಯಕ ಸ್ಥಿತಿಯಿಂದ

ರಚನೆಯಾಗಿದೆ. ಹಾಗಾಗಿ ಏಕವಚನದಲ್ಲಿ ಸಂಬೋಧನೆ ಇದೆ. ಬರಹದಲ್ಲಿ ಎದ್ದು ಕಾಣುವುದು ಮುಸುಗುಡುವ ನೈತಿಕತೆ ಮತ್ತು ಗಾಂಧೀವಾದ. ಆಕ್ರೋಶವನ್ನು ವ್ಯಕ್ತಪಡಿಸುತ್ತಲೂ ಒಂದು ಭಾಷೆಗೆ ಗಡುಸುತನ ಬರುತ್ತದೆ. ವ್ಯಂಗ್ಯ ಕುಹಕ ಆಶ್ಚರ್ಯ ಚಿನ್ಹೆ, ವಿಡಂಬನೆ ಇವುಗಳು ಭಾಷೆಯ ಏರು ಇಳಿವಿನ ಸಾಧನಗಳಾಗುತ್ತವೆ. ವ್ಯಕ್ತವಾಗುವ ಸಿಟ್ಟಿಗೆ ಹೊಸ ರೂಪಕಗಳು ಬಳಕೆಯಾಗುತ್ತವೆ. ಆಗ ಬರೆಹಕ್ಕೆ ಕಾವ್ಯದ ಸ್ವರೂಪವೂ ಸಾಧ್ಯವಾಗುತ್ತದೆ. ಆ ಬಗೆಯ ಎಲ್ಲ ಲಕ್ಷಣಗಳೂ ಈ ಕಾದಂಬರಿಯಲ್ಲಿ ಕಾಣುತ್ತವೆ.

'ಎಂ.ಎಲ್.ಎ ಆದೊಡನೆ ಈತನ ತಲೆಯ ಮೇಲೆ ಎರಡು ಹದನಾದ ಕೋಡುಗಳು ಚಿಗುರಿದವು, ಜನರನ್ನು ಅಧಿಕಾರಿಗಳನ್ನು ಹಿರಿದು ಗಾಯಗೊಳಿಸಲಿಕ್ಕೆ' ಎನ್ನುವಲ್ಲಿ ಪ್ರಬಲವಾದದ್ದನ್ನೇ ತಣ್ಣಗೆ ಹೇಳುವ ದಾಟಿಯಿದೆ. 'ಕಳ್ಳನ ಜೀವ ಹುಳ್ಳಗೆ' 'ನಾಯಿ ಹೊಡೆಯುವ ಕೋಲಿಗಿಂತಲೂ ಕಡೆ', 'ಹೊಟ್ಟೆಯ ಸಿಟ್ಟು ರಟ್ಟೆಗಿಲ್ಲ', 'ಗರತಿಯಾಗಿದ್ದಲ್ಲಿ ಸೂಳೆಯ ಓಣಿಯಲ್ಲಿ ಮನೆ ಮಾಡು', 'ಬೆಂಕಿ ಇದ್ದರೆ ತಾನೆ ಹೊಗೆಯಾಡುವುದು' ಈ ಬಗೆಯ ಜನಪದ ನುಡಿಗಟ್ಟುಗಳನ್ನು ಬಳಸಿಕೊಳ್ಳುವ ಮೂಲಕ ಹೇಳಬೇಕೆಂದದ್ದನ್ನು ಜನಭಾಷೆಯಲ್ಲಿ ಜನಪರವಾಗಿಸುವ ತುಡಿತವಿದೆ. ಭಾಷೆಯ ಓಘ ತೀವ್ರವಾಗಿದೆ. ಜನಸಾಮಾನ್ಯರ ಭಾಷೆಯಲ್ಲಿ ರಾಜರನ್ನು ನಿಂದಿಸುವುದೆಂದರೆ ಅವಮಾನವೇ ಸರಿ. ರಾಜ ವೈಭವವನ್ನು ವರ್ಣಿಸಲು ಹಳೆಗನ್ನಡ ಕಾವ್ಯಗಳಲ್ಲಿ ಶಾಸ್ತ್ರೀಯ ಭಾಷೆಯೊಂದು ದುಡಿದಿದೆ. ಅದೇ ರಾಜರನ್ನು ದೂಷಿಸುವಾಗ ಜನಪದ ಭಾಷೆಯ ನುಡಿಗಟ್ಟುಗಳ ಗಡುಸುತನ ಬಳಕೆಯಾಗಿದೆ. ಇದು ಭಾಷೆ ಬಳಕೆಯ ರಾಜಕಾರಣವೂ ಹೌದು.

ಬರಹದ ಧೋರಣೆ ಸಿಟ್ಟಿನ ಸ್ಫೋಟಗೊಳ್ಳುವಿಕೆ. ಬೀಸು ಹೇಳಿಕೆಗಳಿಲ್ಲದೆ ಖಚಿತಮಾಹಿತಿ ಗಳ ಮೂಲಕ ಅಧಿಕೃತವಾಗಿ ವಿಮರ್ಶಿಸುವ ಗುಣವಿದೆ. ಯಜಮಾನರಿಗೆ 'ಕಾದಂಬರಿ' ಎಂದು ಬರೆಯುವುದರ ಹಿಂದಿನ ತುಡಿತವೇನಾಗಿರಬಹುದು? 'ಪತ್ತೇದಾರಿ'ಕೆಯಲ್ಲಿ ಅಪರಾಧವನ್ನು ಗುರುತಿಸುವ ಮತ್ತು ಅದಕ್ಕೆ ಹೊಡೆಯುವ ನೇರವಂತಿಕೆ ಇದೆ. 'ಹಸಿದ ಮಾನವ ಹುಸಿನುಡಿದು ಹದಗೆಡಿಸಿದ ಸೊಂಡೂರು ನಾಡು' ಅಥವಾ ಮಾಜಿ ಮಹಾರಾಜ ಹಾಗೂ ಯುವರಾಜರ ಭಯಂಕರ ಒಳಸಂಚು ಎನ್ನುವ ಕಾದಂಬರಿಯ ಶೀರ್ಷಿಕೆಯಲ್ಲಿಯೇ ರೋಚಕತೆ ಇದೆ. ಅಧಿಕಾರ ವಿಕೇಂದ್ರಿಕರಣಕ್ಕೆ ಗ್ರಾಮ ಪಂಚಾಯಿತಿಗಳು ಆದರೂ ಭೂ ಒಡೆಯರು, ಉಳ್ಳವರ ಹಸ್ತಕ್ಷೇಪದಿಂದ ಅದರ ದುರುಪಯೋಗ ಹೇಗೆ ನಡೆಯುತ್ತಿತ್ತು ಎನ್ನುವುದನ್ನು ಯಜಮಾನರು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಇಲ್ಲಿ ಪ್ರಜಾಪ್ರಭುತ್ವ ಸರ್ಕಾರದ ದುರ್ಬಲತೆಯನ್ನು ಒತ್ತಿ ಹೇಳಲಾಗಿದೆ. ಇಂಗ್ಲಿಷರ ಆಡಳಿತದಿಂದ ಹೊರಬಂದ ಜನರು ಮುಕ್ತವಾದ ಸ್ವತಂತ್ರ ಬದುಕನ್ನು ಕನಸು ಕಂಡಿದ್ದರು. ಆದರೆ ಆ ಮುಕ್ತತೆ ಇಲ್ಲದೆ ಇಂಗ್ಲಿಷರ ಜಾಗದಲ್ಲಿ ಮತ್ತೊಬ್ಬರು ಬಂದು ಕೂತಂತೆ 'ಪ್ರಜಾಪ್ರಭುತ್ವ' ಸರ್ಕಾರ ಜನತೆಗೆ ಕಾಣಿಸಿತು. ಹಾಗಾಗಿಯೇ ಇಂಗ್ಲಿಷರೊಂದಿಗಿನ ದೇಶಿಯರ ಸಂಘರ್ಷದಂತೆಯೇ ದೇಶಿಯರೊಂದಿಗಿನ ಜನರ ಸಂಘರ್ಷಕ್ಕೆ ಯಜಮಾನರು ಜನನಾಯಕರಂತೆ ಕಾದಂಬರಿಯನ್ನು ನಿರೂಪಿಸಿದ್ದಾರೆ. ಇಂತಹ ಹಲವು ಕಾರಣಕ್ಕಾಗಿ ಈ ಬರಹವು ಮುಖ್ಯವಾಗಿದೆ.

### ಒಕ್ಕಲೆಬ್ಬಿಸುವಿಕೆಗೆ ಪ್ರತಿರೋಧ

ಐವತ್ತರ ದಶಕದ ಸೊಂಡೂರಿನಲ್ಲಿ ಮಹಾರಾಜರ ಅಧಿಕಾರದ ಮಿತಿಗಳ ಬಗೆಗೆ ಆಲೋಚಿ ಸುತ್ತಿದ್ದ ಸಮುದಾಯವೆಂದರೆ ಬ್ರಾಹ್ಮಣರದು. ದೊರೆಗಳಿಗೂ ಈ ಅರಿವಿತ್ತು. ಇವರು ಯಾವುದೇ ಸಮಯದಲ್ಲಿ ದೊರೆಯ ವಿರುದ್ಧ ಜನರನ್ನು ತಯಾರಿ ಮಾಡುವ ಸಾಧ್ಯತೆಯಿತ್ತು. ಹೀಗಾಗಿ ಬುದ್ಧಿವಂತರಾದ ಬ್ರಾಹ್ಮಣರನ್ನು ಮೊದಲು ಆರ್ಥಿಕವಾಗಿ ದುರ್ಬಲಗೊಳಿಸ ಬೇಕಿತ್ತು. ಇದಕ್ಕಾಗಿ ಕೆಲವು ಯೋಜನೆಗಳು ರೂಪುಗೊಂಡವು. ಬ್ರಾಹ್ಮಣರಿಗೆ ದೇವಸ್ಥಾನಗಳ ಪೂಜೆಯ ಕಾರಣಕ್ಕಾಗಿ ದತ್ತಿ ಭೂಮಿಗಳಿದ್ದವು. ಈ ಭೂಮಿ ಅವರನ್ನು ಪ್ರಬಲರನ್ನಾಗಿಸುವ ಶಕ್ತಿಯಾಗಿತ್ತು. ಇದರಿಂದಾಗಿಯೇ ೧೯೫೪ರಲ್ಲಿ ಬ್ರಾಹ್ಮಣರನ್ನು ಒಳಗೊಂಡಂತೆ ಕುಮಾರ ಸ್ವಾಮಿ ದೇವಸ್ಥಾನದ ಭೂಮಿಯ ಗೇಣಿದಾರರನ್ನು ಬಲತ್ಕಾರವಾಗಿ ಒಕ್ಕಲೆಬ್ಬಿಸಲಾಯಿತು. ಈ ಬಗೆಯ ಹಠಾತ್ ದಾಳಿಗೆ ತತ್ತರಿಸಿದ ಜನರು ಅನ್ಯಾಯದ ವಿರುದ್ಧ ಪ್ರತಿಭಟಿಸಿದರು. ಆಗ ಬಳ್ಳಾರಿಯ ಲೋಕಸಭಾ ಸದಸ್ಯರಾಗಿದ್ದ ಶಿವಮೂರ್ತಿ ಸ್ವಾಮಿಯವರು ಇದಕ್ಕೆ ಸ್ಪಂದಿಸಿದರು. ಭಾರತ ಸರಕಾರದ ಗೃಹಖಾತೆಗೆ ಪತ್ರ ಬರೆದು ಸರಕಾರದ ಗಮನ ಸೆಳೆದರು. ಯಜಮಾನ ಶಾಂತರುದ್ರಪ್ಪನವರು 'ಇದ್ದ ಹಲವಾರು ಬ್ರಾಹ್ಮಣರ ಕುಟುಂಬಗಳಲ್ಲಿಯೇ ತನಗೆ ಅವರಿಂದ ಏನಾದರೂ ಮುಂದೆ ತೊಂದರೆಯಾಗಬಹುದೆಂದು ಸಂಶಯದಿಂದ ಅಂತವರ ಬಲ ಕಡಿಮೆ ಮಾಡಲು ಮೊದಲು ಸಭ್ಯರೂ 'ಅಂಜುಬುರುಕರು' ರಾಜನ ವಿರುದ್ಧ ಪ್ರತಿ ನುಡಿಯದವರ ಆಸ್ತಿಗಳನ್ನು ಕತ್ತರಿಸಿದರು. ನಂತರದಲ್ಲಿ

ಕ್ರಮೇಣ ಬಲಿಷ್ಠರೆನಿಸಿಕೊಂಡ ಬ್ರಾಹ್ಮಣರ ಚಂಡಿಕೆ, ಜನಿವಾರಕ್ಕೆ ಕತ್ತರಿ ಪ್ರಯೋಗ ಪ್ರಾರಂಭಿಸಿದರು. ದೇವರ ಪೂಜಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಬ್ರಾಹ್ಮಣ ಪೂಜಾರಿಗಳ ಇನಾಮು ಜಮೀನುಗಳನ್ನು ಸೊಂಡೂರು ಸಂಸ್ಥಾನದ ಹೆಸರಿಗೆ ಸೇರಿಸಿಕೊಂಡು ಅವರಿಗೆ ಪೂಜೆಯ ಪರಿಹಾರಾರ್ಥವಾಗಿ ಕೂಲಿ ಕೊಡಲು ಆರಂಭಿಸಿದರು. ಬರುಬರುತ್ತಾ ಅವರ ಸಂಬಳವನ್ನು ನಿಲ್ಲಿಸಿದರು' ಎಂದು ಬರೆಯುತ್ತಾರೆ.

**ಬಿ.ಡಿ.ಜತ್ತಿಯವರ ಭೇಟಿ ಸಂದರ್ಭದ ಪ್ರತಿಭಟನೆ**

ಬಿ.ಡಿ.ಜತ್ತಿಯವರು ೧೯೫೮ರ ಹೊತ್ತಿನಲ್ಲಿ ಮೈಸೂರಿನ ಮುಖ್ಯಮಂತ್ರಿಗಳಾಗಿದ್ದರು. ಸೆಪ್ಟೆಂಬರ್ ೨೨ರಂದು ಸೊಂಡೂರಿಗೆ ಭೇಟಿ ನೀಡಿದರು. ಸಾಮಾನ್ಯ ಜನರು ಮುಖ್ಯಮಂತ್ರಿಯನ್ನು ಕಣ್ಣೆದುರಿಗೆ ನೋಡುತ್ತೇವೆ ಎಂದು ಸಂಭ್ರಮಿಸಿದರು. ಬಳ್ಳಾರಿಯ ಸೊಂಡೂರು ವಿಮೋಚನ ಸಮರ ಸಮಿತಿಯವರು ಈ ಸಂದರ್ಭಕ್ಕಾಗಿ ಯೋಜನೆಯೊಂದನ್ನು ರೂಪಿಸಿದರು. ಮಹಾರಾಜರ ದುರಾಡಳಿತದ ಕೆಲವು ಅಂಶಗಳನ್ನು ಪಟ್ಟಿಮಾಡಿ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಲು ತಯಾರಿ ಆಯಿತು. ಪಕ್ಷದ ದೃಷ್ಟಿಯಲ್ಲಿ ಎಲಿಗಾರ ತಿಮ್ಮಪ್ಪ ಕಾಂಗ್ರೆಸ್ ನಲ್ಲಿದ್ದರೂ, ತನ್ನ ಸ್ಥಳೀಯ ಹಿತಾಸಕ್ತಿಯಿಂದ ಇದಕ್ಕೆ ಬೆಂಬಲಿಸಿದರು. ಈ ಯೋಜನೆ ತಿಳಿದ ದೊರೆಗಳು ಬಳ್ಳಾರಿಯ ಜಿಲ್ಲಾಧಿಕಾರಿ ಮತ್ತು ಡಿ.ಎಸ್.ಪಿ.ಯವರಿಗೆ ಒಂದು ಎಚ್ಚರಿಕೆ ನೀಡಿದರು. ಯಜಮಾನ ಶಾಂತರುದ್ರಪ್ಪನವರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಲು ಬಂದರೆ ಶಾಂತಿಭಂಗವಾಗುವ ಕಾರಣದಿಂದ ಬಂಧಿಸಬೇಕೆಂದು ತಿಳಿಸಲಾಯಿತು. ಯೋಜನೆಯಂತೆ ಜತ್ತಿಯವರು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುವ ಹೊತ್ತಿಗೆ ಯಜಮಾನ ಶಾಂತರುದ್ರಪ್ಪ ಮತ್ತು ಎಲಿಗಾರ ತಿಮ್ಮಪ್ಪ ಮನವಿ ಸಲ್ಲಿಸಲು ವೇದಿಕೆ ಕಡೆ ಧಾವಿಸಿದರು. ಕೂಡಲೇ ಪೊಲೀಸರು ಇವರನ್ನು ಬಂಧಿಸಿದರು. ಜತ್ತಿಯವರು ಈ ಬಂಧನವನ್ನು ನೋಡಿದರು. ಆದರೆ ಯಾಕೆ ಬಂಧಿಸುತ್ತಿದ್ದಾರೆ, ಏನು ವಿಷಯ ಎನ್ನುವ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ.

ಆ ಹೊತ್ತಿಗೆ ರಾಜವಂಶದ ಜನವಿರೋಧಿ ಅಂಶಗಳನ್ನೆಲ್ಲಾ ಗುರುತಿಸಿ ಅವುಗಳ ಬಗ್ಗೆ ಜನರಿಗೆ ತಿಳಿ ಹೇಳುವವರಲ್ಲಿ ಎಲಿಗಾರ ತಿಮ್ಮಪ್ಪ ಪ್ರಮುಖರಾಗಿದ್ದರು. ಯಜಮಾನ ಶಾಂತರುದ್ರಪ್ಪನವರು ಬಳ್ಳಾರಿ ಭಾಗದಿಂದಲೇ ಹೋರಾಟ ಮಾಡುತ್ತಿದ್ದರಾದರೂ ಅವರ ಅಂತಿಮ ಗುರಿ ಕುಮಾರಸ್ವಾಮಿಯನ್ನು ಅರಸರ ಕೈವಶದಿಂದ ಬಿಡಿಸುವುದಾಗಿತ್ತು. ಅಷ್ಟಾಗಿ ಯಜಮಾನರಿಗೆ ಸ್ಥಳೀಯರ ಬಲವೆಂದರೆ ತಿಮ್ಮಪ್ಪ.

**ರಾಜಧನ ವಂಚನೆಯ ಪ್ರತಿರೋಧ**

ಭಾರತದ ಒಕ್ಕೂಟದಲ್ಲಿ ಸೇರಿದ ಸಂಸ್ಥಾನಗಳ ವಾರಸುದಾರರಿಗೆ ರಾಜಧನ ಕೊಡುವುದಾಗಿ ಒಪ್ಪಂದವಾಗಿತ್ತು. ಸಂಸ್ಥಾನದ ಆದಾಯಕ್ಕೆ ತಕ್ಕಷ್ಟು 'ಪ್ರಿವಿ ಪರ್ಸ್' ಕೊಡುವ ನಿರ್ಣಯ ವಿತ್ತು. ಇದರ ನಿರ್ಧಾರಕ್ಕೆ ಕೆಲವು ನಿಯಮಾವಳಿಗಳಿದ್ದವು. ಯಾವುದೇ ರಾಜ್ಯದ ವಾರ್ಷಿಕ ಸರಾಸರಿ ವರಮಾನದ ಪ್ರಥಮ ಒಂದು ಲಕ್ಷದಲ್ಲಿ ಶೇಕಡ ೧೫ರಷ್ಟು 'ನಂತರದ ನಾಲ್ಕು ಲಕ್ಷದಲ್ಲಿ ಶೇ ೧೦%ರಷ್ಟು ಐದು ಲಕ್ಷಕ್ಕೂ ಹೆಚ್ಚಿನ ವರಮಾನದಲ್ಲಿ ಶೇ ೭ರಷ್ಟು' ಒಟ್ಟು ಹತ್ತುಲಕ್ಷಕ್ಕೆ ಮೀರದಂತೆ ರಾಜಧನ ನೀಡುವುದಾಗಿ ಸರ್ಕಾರ ತೀರ್ಮಾನಿಸಿತು. ಸೊಂಡೂರು ಸಂಸ್ಥಾನದ ವಾರ್ಷಿಕ ಆದಾಯ ಎರಡು ಲಕ್ಷವಿತ್ತು. ಈ ಆದಾಯಕ್ಕೆ ೨೫ ಸಾವಿರ ರಾಜಧನ ಸಿಗಬೇಕು. ಆದರೆ ಯಶವಂತರಾವ್ ಘೋರ್ಪಡೆಯವರು ಪಡೆಯುತ್ತಿದ್ದ ರಾಜಧನ ೯೦ ಸಾವಿರ. ಆಗ ಯಜಮಾನ್ ಶಾಂತರುದ್ರಪ್ಪನವರು 'ಮಹಾರಾಜರು ಸರ್ಕಾರವನ್ನು ವಂಚಿಸುತ್ತಿ ದ್ದಾರೆ' ಎಂದು ಕರಪತ್ರ ಹಂಚಿದರು. ಕೋ.ಚೆನ್ನಬಸಪ್ಪನವರ 'ರೈತ ಪತ್ರಿಕೆ' ಒಳಗೊಂಡಂತೆ ಹಲವು ಪತ್ರಿಕೆಗಳು ಈ ವಂಚನೆಯ ವಾಸ್ತವವನ್ನು ವರದಿ ಮಾಡಿದವು.

ಇದರ ಒಟ್ಟು ಸಾರ ಹೀಗಿದೆ: ೯೦ ಸಾವಿರ ರೂ.ಗಳ ರಾಜಧನ ಪಡೆಯಬೇಕಿದ್ದರೆ ವರ್ಷ ಸೊಂಡೂರು ವಾರ್ಷಿಕ ಸರಾಸರಿ ವರಮಾನ ೧೦ ಲಕ್ಷ ರೂ. ಇರಬೇಕು. ಒಂದು ವೇಳೆ ಹತ್ತು ಲಕ್ಷ ರೂ.ಗಳ ವರಮಾನವಿತ್ತು ಎಂದುಕೊಳ್ಳೋಣ. ಆಗ ೧೫೮ ಚದುರ ಮೈಲು ಭೂಮಿಗೆ ೧೦ ಲಕ್ಷರೂ. ವರಮಾನ ಬರಬೇಕಾದರೆ ಚದುರ ಮೈಲು ಭೂಮಿಗೆ ೬,೩೨೯ ರೂ.ಗಳ ವರಮಾನವಿರಬೇಕಾಗುತ್ತೆ. ಒಂದು ಚದುರ ಮೈಲು ಭೂಮಿಯಿಂದ ಇಷ್ಟು ವರಮಾನ ಬರಬೇಕಾದರೆ ಇಲ್ಲಿ ಬರಿ ಬಂಗಾರವನ್ನೇ ಬಿತ್ತಿ ಬೆಳೆಯುತ್ತಿರಬೇಕು. ಪ್ರಜೆಗಳ ಲೆಕ್ಕಚಾರದಲ್ಲಿ ಅದನ್ನು ಹೀಗೂ ನೋಡಬಹುದು. ೧೦ ಲಕ್ಷ ಕೊಡುತ್ತಿದ್ದವರು ಸೊಂಡೂರಿನ ೧೫,೦೦೦ ಪ್ರಜೆಗಳು. ಜನಸಂಖ್ಯೆಯಲ್ಲಿ

ಒಬ್ಬೊಬ್ಬರು ೬,೬೬೬ ರೂನಷ್ಟು ಕಂದಾಯ ಕೊಡಬೇಕು. ವಾಸ್ತವದಲ್ಲಿ ಇದು ನಂಬಲರ್ಹವಲ್ಲದ ಸಂಗತಿ. ಆದರೆ ಈ ಮಾಹಿತಿಯನ್ನು ನೀಡಿಯೇ ಯಜಮಾನರು ಕರಪತ್ರ ಹಂಚಿದರು.

ಮಾರ್ಚ್ ೩.೧೯೭೩ರಂದು ಸೊಂಡೂರು ಸತ್ಯಾಗ್ರಹದ ಪೂರ್ವಭಾವಿಯಾಗಿ ಬೆಂಗಳೂರಿನಲ್ಲಿ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಸೊಂಡೂರಿನ ರೈತರು ಮೆರವಣಿಗೆ ಮಾಡಿದರು. ಈ ಮೆರವಣಿಗೆಯ ಅಜೆಂಡಾ ಅಂದು ಕಾಗೋಡು ಇಂದು ಸೊಂಡೂರು ಎಂಬುದಾಗಿತ್ತು. ಈ ಮೆರವಣಿಗೆಯಲ್ಲಿ ಕೆ.ಜಿ.ಮಹೇಶ್ವರಪ್ಪ, ಜೆ.ಎಚ್.ಪಟೇಲ್, ಎಂ.ಪಿ. ಪ್ರಕಾಶ್, ಯಜಮಾನ ಶಾಂತರುದ್ರಪ್ಪ, ಎಲಿಗಾರ ತಿಮ್ಮಪ್ಪ, ಎಸ್.ಎಸ್.ಕುಮುಟ, ಕಾಗೋಡು ತಿಮ್ಮಪ್ಪ ಮುಂತಾದ ಪ್ರಮುಖರನ್ನೊಳಗೊಂಡಂತೆ ನೂರಕ್ಕೂ ಹೆಚ್ಚು ಸಮಾಜವಾದಿ ಪಕ್ಷ ಕಾರ್ಯಕರ್ತರೂ, ಸೊಂಡೂರಿನ ರೈತರು ಅತ್ಯಂತ ಉತ್ಸುಕತೆಯಿಂದ ಭಾಗವಹಿಸಿದ್ದರು. ಬೆಂಗಳೂರಿನಲ್ಲಿ ಮೊದಲ ಬಾರಿಗೆ ಸೊಂಡೂರು ರೈತರ ಶೋಷಣೆಯ ಮುಕ್ತಿಗಾಗಿ ನಡೆಸಿದ ಮೆರವಣಿಗೆ ಇದಾಗಿತ್ತು.

**ಯಜಮಾನರು ಮತ್ತು ವಿಠ್ಠಲ ಪ್ರೆಸ್**

ಯಜಮಾನ ಶಾಂತರುದ್ರಪ್ಪ ಅವರು ಬಳ್ಳಾರಿಯಲ್ಲಿ ಸ್ವಂತದ ವಿಠ್ಠಲ ಪ್ರೆಸ್ ಹೊಂದಿದ್ದರು. ಈ ಪ್ರೆಸ್‌ನ್ನು ಅವರು ಹೆಚ್ಚು ಬಳಸಿದ್ದು ಕರಪತ್ರ ಪ್ರಕಟಿಸಲು. ಅವರು ಸೊಂಡೂರು ರಾಜಮನೆತನದ ವಿರುದ್ಧ ಹೊರಡಿಸುತ್ತಿದ್ದ ಎಲ್ಲಾ ಕರಪತ್ರಗಳು, ಕಿರು ಪುಸ್ತಕಗಳು ಇದೇ ವಿಠ್ಠಲ ಪ್ರೆಸ್‌ನಿಂದ ಪ್ರಕಟವಾಗುತ್ತಿದ್ದವು. ಯಜಮಾನರು ಈ ಪ್ರೆಸ್ ನ್ನು ತಮ್ಮ ಹೋರಾಟ ಚಳವಳಿಗೆ ಒಂದು ಶಕ್ತಿಯ ಸ್ಥಾನದಂತೆ ಬಳಸುತ್ತಿದ್ದರು. ಹಾಗಾಗಿ ಯಜಮಾನರ ಬಗ್ಗೆ ಮಾತನಾಡುವಾಗಲೆಲ್ಲಾ ವಿಠ್ಠಲ್ ಪ್ರೆಸ್ ಒಂದು ಪಾತ್ರದಂತೆ ಕಾಣುತ್ತದೆ. ಅಥವಾ ಯಜಮಾನರಿಗೆ ಅದು ಶಕ್ತಿಸಂಚಲದ ಕೇಂದ್ರವೂ ಆಗಿತ್ತು. ಶಾಂತರುದ್ರಪ್ಪ ಅವರು ಕೇಂದ್ರದ ಮಂತ್ರಿಗಳಿಂದ ಹಿಡಿದು ರಾಜ್ಯದ ಮಂತ್ರಿಗಳಿಗೂ, ನ್ಯಾಯಾಧೀಶರುಗಳಿಗೂ ನೇರವಾಗಿ ಪತ್ರ ಬರೆಯುತ್ತಿದ್ದರು. ಆಗಿನ ಕಾಲದಲ್ಲಿಯೇ ಎಲ್ಲಾ ಪತ್ರಗಳನ್ನೂ ಇಂಗ್ಲೀಷಿನಲ್ಲಿ ಅಚ್ಚು ಹಾಕಿಸಿ ಅವುಗಳನ್ನು ಮುದ್ರಿಸಿ ಕಳಿಸುತ್ತಿದ್ದರು. ಹೀಗೆ ವಿಠ್ಠಲ್ ಪ್ರೆಸ್ ಯಜಮಾನರ ಹೋರಾಟದ ಸಂಗಾತಿಯೂ ಆಗಿತ್ತು.

ಶಾಂತರುದ್ರಪ್ಪ ಅವರ ಬಗ್ಗೆ ತಿಳಿದವರು ಅವರು ಊರೂರು ಅಲೆದು ಪುಸ್ತಕ ಮಾರುತ್ತಿದ್ದರು ಎಂತಲೂ ಹೇಳುತ್ತಾರೆ. ಹಾಗೆ ಮಾರುವ ಬಹುಪಾಲು ಪುಸ್ತಕಗಳು ವಿಠ್ಠಲ್ ಪ್ರೆಸ್ ನಿಂದಲೇ ಪ್ರಕಟವಾಗುತ್ತಿದ್ದವು. ಈಗಲೂ ಬಳ್ಳಾರಿಯ ಅನಂತಪುರ ರಸ್ತೆಯಲ್ಲಿ ಯಜಮಾನ ಅಂಡ್ ಬ್ರದರ್ಸ್ ಎನ್ನುವ ಪುಸ್ತಕದ ಅಂಗಡಿ ಇದೆ. ಈಗ ಶಾಂತರುದ್ರಪ್ಪ ಅವರ ತಮ್ಮನ ಮಕ್ಕಳು ನಡೆಸಿಕೊಂಡು ಹೋಗುತ್ತಾರೆ. ಕಾರಣ ಹೋರಾಟದ ಹುಚ್ಚಲ್ಲಿ ಯಜಮಾನರು ಮದುವೆಯಾಗುವುದನ್ನು ಮರೆತರು. ತಮ್ಮನ ಮಕ್ಕಳನ್ನು ತಮ್ಮ ಮಕ್ಕಳು ಎಂದು ಭಾವಿಸಿ ಸಾಕಿ ಸಲಹಿದರು.

ಹೀಗೆ ಶಾಂತರುದ್ರಪ್ಪ ಅವರು ಕರ್ನಾಟಕದ ಚರಿತ್ರೆಯಲ್ಲಿಯೂ ನೆನಪಿಟ್ಟುಕೊಳ್ಳಬಹುದಾದ ಒಂದು ವ್ಯಕ್ತಿತ್ವ. ಆದರೆ ಅವರ ಬಗ್ಗೆ ಈವರೆಗೂ ಯಾವುದೇ ಅಧ್ಯಯನಗಳು ನಡೆದಂತಿಲ್ಲ. ಅವರ ವ್ಯಕ್ತಿ ಚಿತ್ರದ ಇನ್ನಷ್ಟು ಮಾಹಿತಿಗಳನ್ನು ಶೋಧಿಸುವ ಅಗತ್ಯವಿದೆ. ಈ ಲೇಖನದಲ್ಲಿ ಯಜಮಾನರ ವ್ಯಕ್ತಿತ್ವದ ಒಂದು ಹೋರಾಟದ ಮುಖವನ್ನು ಕಾಣಿಸಲು ಪ್ರಯತ್ನಿಸಲಾಗಿದೆ.

# ಚಳ್ಳಕೆರೆಯ ಕಂಬಳಿ ಸಂತೆ



ಮಾರಾಟಕ್ಕೆ ಸಿದ್ಧ ಥರಾವರಿ ಕಂಬಳಿ

ಗಾಂಧೀಜಿ ಜನಪದರ ವೃತ್ತಿ ಕಸಬುಗಳನ್ನೇ ಆಧರಿಸಿದ ಪುಟ್ಟ- ಪುಟ್ಟ ಕೈಗಾರಿಗೆಗಳನ್ನು ಅಭಿವೃದ್ಧಿಪಡಿಸುವ ಗುಡಿ ಕೈಗಾರಿಕೆಗಳ ಕಲ್ಪನೆಯನ್ನು ಕೊಟ್ಟರು. ಆ ಮೂಲಕ ಜನಸಾಮಾನ್ಯರು ಸ್ವಾವಲಂಬಿಗಳಾಗಿ ಬದುಕುವ ಕನಸು ಕಂಡಿದ್ದರು. ಆದರೆ, ಇಂದು ಜನಪದರ ಕಸಬುಗಳು ಕೆಲವು ಕಳೆದೇ ಹೋದವು. ಕಾರಣ ಅವುಗಳು ವರ್ತಮಾನದ ಜತೆ ಸಾವಯವ ಸಂಬಂಧ ಕಡಿದುಕೊಂಡು ಪರಕೀಯ ಎನ್ನುವಂತಹ ವಾತಾವರಣ ನಿರ್ಮಾಣವಾಯಿತು.

ಇಷ್ಟೆಲ್ಲದರ ನಡುವೆ ಇನ್ನೂ ಅನೇಕ ಜನಪದ ಕುಲಕಸಬುಗಳು ಜೀವಂತವಾಗಿವೆ. ಆದರೆ, ಅವುಗಳು ಪಡೆದ ವ್ಯಾಪಕ ವಿಸ್ತಾರವನ್ನು ಕಡಿದುಕೊಂಡು ಒಂದು ಸಣ್ಣ ವಲಯದಲ್ಲಿ ಜೀವಿಸುತ್ತಿವೆ. ಅದನ್ನು ಗುರುತಿಸಿ ಅದರ ವಲಯದ ವ್ಯಾಪ್ತಿಯನ್ನು ವರ್ತಮಾನದ ಅಗತ್ಯಗಳಿಗೆ ತಕ್ಕಂತೆ ವಿಸ್ತರಿಸಬೇಕಿದೆ. ಮುಖ್ಯವಾಗಿ ಆಯಾ ಕಸಬು ಯಾವ ಸ್ಥಿತಿಯಲ್ಲಿ ಮುಂದುವರಿಯುತ್ತಿದೆ? ಅದನ್ನು ನಂಬಿದ ಜನರ ಬದುಕು ಹೇಗಿದೆ? ಈ ಕಸುಬಿಗೆ ಮರುಜೀವ ತುಂಬಲು ಅದನ್ನು ನಂಬಿದವರು ನಿರೀಕ್ಷಿಸುವುದೇನು? ಅದರ ಬಳಕೆಯ ವಲಯವನ್ನು ಹೆಚ್ಚಿಸಿ ಆಯಾ ಕಸಬಿಗೆ ಮರುಜೀವ ನೀಡುವ ಸಾಧ್ಯತೆಗಳೇನು? ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲ ಬಗೆಯ ವೃತ್ತಿಕಸಬುಗಳನ್ನು ಮರು ಭೇಟಿ ಮಾಡುವ ಅಗತ್ಯವಿದೆ. ಹೀಗೆ ಚಳ್ಳಕೆರೆಯ ಕಂಬಳಿ ಉದ್ಯಮವನ್ನು ಮರು ಭೇಟಿ ಮಾಡಿ ಅದರ ಸದ್ಯದ ಸ್ಥಿತಿಯನ್ನು ಗುರುತಿಸಲು ಈ ಬರಹದಲ್ಲಿ ಪ್ರಯತ್ನಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಒಂದು ತಾಲೂಕು ಚಳ್ಳಕೆರೆ. ಇದೊಂದು ವಾಣಿಜ್ಯ ಪಟ್ಟಣ. ಇಲ್ಲಿ ಎಣ್ಣೆ, ಭತ್ತ ಮುಂತಾದ ಕಾರ್ಖಾನೆಗಳಿವೆ. ಎಣ್ಣೆಯ ಉದ್ಯಮಕ್ಕೆ ಹೆಚ್ಚು ಹೆಸರುವಾಸಿಯಾಗಿರುವುದರಿಂದ ಚಳ್ಳಕೆರೆಯನ್ನು 'ಆಯಿಲ್ ಟೌನ್' ಎಂತಲೂ ಕರೆಯುತ್ತಾರೆ. ಇಲ್ಲಿನ ದೇಸಿ ಮಾರುಕಟ್ಟೆ ಜನಸಮುದಾಯದ ವ್ಯಾಪಕ ವಿಸ್ತಾರವನ್ನು ಹೊಂದಿದೆ.

ಮುಖ್ಯವಾಗಿ ಈ ಭಾಗದಲ್ಲಿ ಕಂಬಳಿ ನೇಯುವ ಜನಪದ ಕಸಬು ಜೀವಂತವಾಗಿದೆ. ಇಂದು ಕರ್ನಾಟಕದ ಬೇರೆ- ಬೇರೆ ಭಾಗಗಳಲ್ಲಿಯೂ ಕಂಬಳಿ ನೇಯ್ಗೆ ಇದೆ. ಆದರೆ, ಅದರ ಪ್ರಮಾಣ ಮೊದಲಿಗಿಂತ ಈಗ ಕಡಿಮೆಯಾಗುತ್ತಾ ಸಾಗುತ್ತಿದೆ. ಇದು ಮೂಲತಃ ಕುರಿಸಾಕಣೆಗೆ ಹೊಂದಿಕೊಂಡಂತಹ ಉಪಕಸಬು. ಕುರಿಯ ಕೂದಲನ್ನು ಕತ್ತರಿಸಿ, ಆ ಕೂದಲಿನಿಂದ ನೂಲು ತೆಗೆದು, ಆ ನೂಲಿನಿಂದ ಕಂಬಳಿ ನೇಯುವುದು, ಆ ಕಂಬಳಿಯನ್ನು ಮಾರಾಟ ಮಾಡುವುದು ನಡೆಯುತ್ತದೆ.

ಇಂದು ಕುರಿ ಸಾಕಣೆಯ ಪ್ರಮಾಣವೇ ಕಡಿಮೆಯಾಗುತ್ತಿರುವುದರಿಂದ ಸಹಜವಾಗಿ ಅದಕ್ಕೆ ಹೊಂದಿಕೊಂಡಂತಹ ಕಂಬಳಿ ನೇಯ್ಗೆಯೂ ಮೊದಲಿಗಿಂತ ಕಡಿಮೆಯಾಗಿದೆ. ಈ ನಡುವೆಯೂ ಚಳ್ಳಕೆರೆಯಲ್ಲಿ ಕಂಬಳಿ ಉದ್ಯಮ ಪ್ರತಿ ವಾರವೂ ಹತ್ತಾರು ಲಕ್ಷಗಳ ವಹಿವಾಟು ನಡೆಸುತ್ತಿದೆ. ಈ ಉದ್ಯಮವನ್ನು ನಂಬಿ ಈ ಭಾಗದ ನೂರಾರು ಹಳ್ಳಿಗಳ ಜನರು ಕಂಬಳಿ ನೇಯುವ ಕುಲಕಸಬಿನಲ್ಲಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಆ ಬಗ್ಗೆ ಒಂದು ನೋಟ ಇಲ್ಲಿದೆ.



ಕಂಬಳಿ ಮಾರಾಟ ಭರಾಟೆ

ಚಳ್ಳಕೆರೆಯ ಸಂತೆಪೇಟೆಯ ಕಂಬಳಿಕಟ್ಟೆ ಎನ್ನುವ ಪ್ರದೇಶದಲ್ಲಿ ಪ್ರತಿ ಭಾನುವಾರ ಕಂಬಳಿ ಸಂತೆ ನಡೆಯುತ್ತದೆ. ಆ ದಿನ ಕಂಬಳಿ ಅಂಡಿಗೆಗಳು ಬಂದು ಇಳಿಯುತ್ತವೆ. ಒಂದೆರಡು ಕಂಬಳಿಗಳನ್ನು ನೇಯ್ದು ವಾರದ ಮನೆ ಕರ್ಚಿಗೆಂದು ಮಾರಲು ಬಂದ ಬಿಡಿ ಕಂಬಳಿದಾರರೂ ಇರುತ್ತಾರೆ. ಇಲ್ಲಿ ಸುತ್ತಮುತ್ತಲ ಹಳ್ಳಿಗಳ ಕುರಿಗಾರರು, ರೈತರು, ನೇಕಾರರು ತಾವು ನೇಯ್ದು ತಂದ ಕಂಬಳಿಗಳನ್ನು ಮಾರಾಟ ಮಾಡುತ್ತಾರೆ. ಕಂಬಳಿಯನ್ನು ಕೊಳ್ಳಲು ಆಂಧ್ರ, ಮಹಾರಾಷ್ಟ್ರ, ಹಿಮಾಚಲ, ಕಾಶ್ಮೀರ, ಅಂಡಮಾನ್- ನಿಕೋಬರ್ ಭಾಗಗಳಿಂದಲೂ ವ್ಯಾಪಾರಸ್ಥರು ಬರುತ್ತಾರೆ.

ವಿಪರ್ಯಾಸವೆಂದರೆ, ಕಂಬಳಿಯ ಬಳಕೆ ಈ ಭಾಗದಲ್ಲಿಯೇ ಕಡಿಮೆಯಾಗಿದೆ. ಹಿಮಾಲಯ, ಕಾಶ್ಮೀರ ಮುಂತಾದ ಹಿಮ- ಚಳಿ ಹೆಚ್ಚಿರುವ ಉತ್ತರ ಭಾರತದಲ್ಲಿ ಕಂಬಳಿಗೆ ದೊಡ್ಡ ಬೇಡಿಕೆ ಇದೆ. ಈ ಬೇಡಿಕೆಯನ್ನು ಆಧರಿಸಿಯೇ ಇಲ್ಲಿ ಕಂಬಳಿ ಸಂತೆ ಈಗಲೂ ಕಳೆಗಟ್ಟುತ್ತಿರುವುದು. ಉತ್ತರ ಭಾರತದ ರಾಜ್ಯಗಳ ಜನರು ಬೆಚ್ಚಗಿರಲು ಚಳ್ಳಕೆರೆ ಭಾಗದ ಕಂಬಳಿಯನ್ನು ನೆಚ್ಚಿದ್ದರಿಂದ ಕಂಬಳಿ ನೇಯ್ಗೆಯನ್ನು ನಂಬಿದ ಸಮುದಾಯಗಳ ಹೊಟ್ಟೆ ತಣ್ಣಗಿದೆ.

ನೇಕಾರರು ಸಂತೆ ಕಂಬಳಿಯನ್ನು ಎರಡು ದಿನಕ್ಕೆ ಒಂದರಂತೆ ನೇಯ್ದರೆ, ನೈಸ್ ಕಂಬಳಿಯನ್ನು ವಾರಕ್ಕೆ ಒಂದರಂತೆ ನೇಯುತ್ತಾರೆ. ಒಂದು ಕಂಬಳಿಗೆ ೩೫೦ ರೂಪಾಯಿಗಳಿಂದ ಆರಂಭವಾಗಿ, ೧೦೦೦ ರೂಪಾಯಿಗಳ ತನಕ ತಾರಾವರಿ ಬೆಲೆ ಇದೆ. ಈ ಬೆಲೆಯು ಆಯಾ ಕಂಬಳಿಯ ಗುಣಮಟ್ಟ ಮತ್ತು ಕಂಬಳಿಗೆ ಬಳಸಿದ ಉಣ್ಣೆಯ ಗುಣಮಟ್ಟವನ್ನು ಆಧರಿಸಿರುತ್ತದೆ. ಸಂತೆ ಕಂಬಳಿ ಒರಟಾಗಿದ್ದರೆ, ನೈಸ್ ಕಂಬಳಿ ತುಂಬಾ ನಯವಾಗಿಯೂ ತೆಳ್ಳಗೂ ಇರುತ್ತದೆ. ಆಧುನಿಕ ಕಾಲಮಾನಕ್ಕೆ ಒಪ್ಪುವಂತೆ ನಯವಾದ ಕಂಬಳಿಯನ್ನು ನೇಯುವ ಬದಲಾವಣೆಯೂ ಈ ನೇಯ್ಗೆಯಲ್ಲಿ ಆಗಿದೆ.

ಈ ಕಂಬಳಿ ಸಂತೆಯಲ್ಲಿ ಕೇವಲ ಕಂಬಳಿ ಮಾತ್ರ ಮಾರಾಟವಾಗುವುದಿಲ್ಲ, ಅದಕ್ಕೆ ಹೊಂದಿಕೊಂಡಂತೆ ಉಣ್ಣೆ ಮತ್ತು ಕಂಬಳಿ ತಯಾರಿಕೆಗೆ ಬೇಕಾಗುವ ಸಾಮಗ್ರಿಗಳ ಮಾರಾಟವೂ ನಡೆಯುತ್ತದೆ. ಅದರಲ್ಲಿ ಮುಖ್ಯವಾಗಿ ಹುಣಸೆ ಹಿಟ್ಟು (ಸರಿ ಪುಡಿ), ದಾರ (ಬೆದ), ಬಣ್ಣ (ನೀಲಿ ಮತ್ತು ಕೆಂಪು), ಕುಂಚಿಗೆ, ಉಣ್ಣೆ ಕತ್ತರಿ ಮುಂತಾದವುಗಳ ಮಾರಾಟವೂ ನಡೆಯುತ್ತದೆ.

ಇಲ್ಲಿಗೆ ಪ್ರಮುಖವಾಗಿ ಚಳ್ಳಕೆರೆ ಸುತ್ತಮುತ್ತಲ ಗೊರಲಕಟ್ಟೆ, ನೀರಲಗುಂಟೆ, ಚೌಳೂರು, ತರಗಲಬಂಡೆ, ಕಾಮ ಸಮುದ್ರ, ದೊಡ್ಡುಳ್ಳಾರ್ತಿ, ಗಟ್ಟಪರ್ತಿ, ಓಬಳಾಪುರ, ಕೊಂಡ್ಲಹಳ್ಳಿ, ಮೊಗಲಹಳ್ಳಿ, ತಾಯಕನಹಳ್ಳಿ, ಉಡೇಂ, ಪರೆಕೋಲಮ್ಮನಹಳ್ಳಿ ಮುಂತಾದ ಹಳ್ಳಿಗಳಿಂದ ಕಂಬಳಿ ತಯಾರಕರು ಕಂಬಳಿ ಮಾರಲು ಬರುತ್ತಾರೆ.

ಕುರಿಗಾರಿಕೆ ಮತ್ತು ಕಂಬಳಿ ನೇಯ್ಗೆಯಲ್ಲಿ ಇಲ್ಲಿನ ಹಲವಾರು ಸಮುದಾಯಗಳು ಭಾಗಿಯಾಗಿವೆ. ಪ್ರಮುಖವಾಗಿ ಇದರಲ್ಲಿ ಕುರುಬರು, ಗೊಲ್ಲರು, ಬೇಡರು, ಒಕ್ಕಲಿಗರ ಸಮುದಾಯಗಳಿವೆ. ಉಣ್ಣೆ ತೆಗೆಯುವುದು, ಉಣ್ಣೆಯನ್ನು ಸ್ವಚ್ಚಗೊಳಿಸುವುದು, ನೂಲು ತೆಗೆಯುವುದು, ನೇಯುವುದರಲ್ಲಿ ಮಹಿಳೆಯರ ಭಾಗವಹಿಸುವಿಕೆ ದೊಡ್ಡ ಪ್ರಮಾಣದಲ್ಲಿದೆ. ಆದರೆ, ಇದರ ಮಾರಾಟ, ವ್ಯವಹಾರದಲ್ಲಿ ಮಾತ್ರ ಮಹಿಳೆಯರ ಪಾತ್ರ ಶೂನ್ಯ.

ಕಂಬಳಿಯ ವ್ಯಾಪಾರದಲ್ಲಿ ಪುರುಷ ಪ್ರಧಾನತೆಯೇ ಎದ್ದು ಕಾಣುತ್ತದೆ. ಕುರಿಯವರಿಂದ ನೇಕಾರರು ಕುರಿಯ ಉಣ್ಣೆಯನ್ನು ಕತ್ತರಿಸಿಕೊಂಡು ಬಂದು, ಅದಕ್ಕೆ ಬದಲಿಯಾಗಿ ಕುರಿಯವರಿಗೆ ಕಂಬಳಿಯನ್ನು ಕೊಡುವ ಪದ್ಧತಿ ಇದೆ. ಈಗೀಗ ಕುರಿಯ ಉಣ್ಣೆ ಕತ್ತರಿಸಲು ಕುರಿಯವರೇ ನೇಕಾರರಿಗೆ ಒಂದು ಕುರಿಗೆ ಎರಡು ರೂಪಾಯಿಯನ್ನು ಕೊಡುತ್ತಾರೆ. ಸ್ವಚ್ಚಗೊಂಡ ಒಂದು ಮಣ ಉಣ್ಣೆಗೆ ೩೫೦ ರಿಂದ ೪೦೦ ರೂ.ಗಳವರೆಗೆ ಬೆಲೆ ಇದೆ.

ಕಂಬಳಿ ನೇಯುವ ನೇಕಾರ ಕುಟುಂಬಗಳಿಗೆ ಸ್ವಲ್ಪಮಟ್ಟಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯ ನೇಕಾರ ಕಲ್ಯಾಣ ಯೊಜನೆಯಡಿ ಸಹಾಯ ದೊರೆಯುತ್ತಿದೆ. ಅವುಗಳಲ್ಲಿ ಪ್ರಮುಖವಾಗಿ ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಮಹಿಳೆಯರಿಗೆ ಹೆರಿಗೆ ಭತ್ಯೆ, ರಾಜೀವ್ ಗಾಂಧಿ ವಸತಿ ಯೋಜನೆಯಡಿ ಮನೆಗಳ ನಿರ್ಮಾಣ ಹೀಗೆ ಹಲವಾರು ಯೋಜನೆಗಳಿವೆ. ಇವುಗಳ ಸಮರ್ಥವಾದ ವಿತರಣೆಯ ಕೊರತೆ ಎದ್ದು ಕಾಣುತ್ತಿದೆ. ಇಂತಹ ಸೌಲಭ್ಯಗಳನ್ನು ಕೂಡ ರಾಜಕೀಯವಾಗಿ ಪ್ರಬಲವಿರುವವರು ಪಡೆಯುತ್ತಾರೆ. ಹಾಗಾಗಿ ಇಲ್ಲಿಯೂ ಅಸಹಾಯಕ ನೇಕಾರರು ಸೌಲಭ್ಯಗಳನ್ನು ಪಡೆಯಲು ಇಲ್ಲದ ಹರಸಾಹಸ ಮಾಡಬೇಕಾಗಿದೆ.



ಪಟ್ಟೆ ಕಂಬಳಿಗೆ ಚೌಕಾಸಿ!

ಈ ಕಂಬಳಿ ಉದ್ಯಮವನ್ನು ಆಧರಿಸಿ ಚಳ್ಳಕೆರೆಯಲ್ಲಿ ಸರ್ಕಾರ 'ಉಣ್ಣೆ ಉತ್ಪಾದನಾ ಮಾರಾಟ ಸಹಕಾರ ಮಹಾ ಮಂಡಳ'ವನ್ನು ಸ್ಥಾಪಿಸಿದೆ. ಈ ಮಂಡಳಿ ನೇಕಾರರಿಗೆ ಉಣ್ಣೆಯನ್ನು ಮಾರಾಟ ಮಾಡುತ್ತದೆ, ಅಂತೆಯೇ ಕಂಬಳಿಯನ್ನು ಕೊಳ್ಳುವ ಮತ್ತು ಮಾರುವ ಕೆಲಸಕ್ಕೆ ಸಹಕಾರವನ್ನೂ, ಕಂಬಳಿಗೆ ಪೂರಕವಾದ ಸಾಲ- ಸೌಲಭ್ಯಗಳನ್ನೂ ಒದಗಿಸುತ್ತದೆ. ಆದರೆ, ಅದು ಇನ್ನೂ ಹೆಚ್ಚು ಕ್ರಿಯಾಶೀಲವಾಗಿ ನೇಕಾರರಿಗೆ ಸ್ಪಂದಿಸಿದಂತೆ ಕಾಣುವುದಿಲ್ಲ.

ಇಲ್ಲಿ ಕಂಬಳಿಯನ್ನು ಆಧರಿಸಿದ ದೊಡ್ಡ ಆಚರಣಾ ಪರಂಪರೆಯೇ ಇದೆ. ಇದರಲ್ಲಿ ಸ್ವಲ್ಪ ಬದಲಾವಣೆಯಾಗಿದೆಯಾದರೂ ಅದರ ಸಾಂಪ್ರದಾಯಿಕ ನಂಬಿಕೆಯ ಲೋಕದಲ್ಲಿ ಅಷ್ಟು ಬದಲಾವಣೆ ಆದಂತಿಲ್ಲ. ಈ ಕಂಬಳಿ ನೇಯ್ಗೆಯ ಉದ್ಯಮದಲ್ಲಿ ಯುವ ಜನತೆಯನ್ನು ಆಕರ್ಷಿಸುವಂತಹ ಗುಣ ಕಡಿಮೆ. ಅದರಲ್ಲೂ ವಿದ್ಯಾವಂತ ಯುವ ಜನತೆ ಈ ಕಂಬಳಿ ನೇಯ್ಗೆ ಉದ್ಯಮದ ಕಡೆ ಬರುವಂತಹ

ವಾತಾವರಣ ಸೃಷ್ಟಿಯಾಗಬೇಕಿದೆ. ಅಥವಾ ನಗರಗಳತ್ತ ವಲಸೆ ಹೋಗುವ ಯುವಕರನ್ನು ಕಂಬಳಿ ಉದ್ಯಮದಲ್ಲಿ ತೊಡಗಿಕೊಳ್ಳುವಂತಹ ವಾತಾವರಣ ಸೃಷ್ಟಿ ಮಾಡುವಂತಹ ಯೋಜನೆಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ. ಹಾಗಾದಲ್ಲಿ ಈ ಕಂಬಳಿ ಉದ್ಯಮವನ್ನು ಮತ್ತಷ್ಟು ಬೆಳೆಸುವ ಸಾಧ್ಯತೆಗಳಿವೆ.

# ನಾರು ನಂಬಿದ ಊರು

ಚಳ್ಳಕೆರೆಯಿಂದ ಚಿತ್ರದುರ್ಗಕ್ಕೆ ಹೋಗುವ ಮಾರ್ಗದಲ್ಲಿ ನಂದನಹಳ್ಳಿ ಎಂಬ ಚಿಕ್ಕ ಹಳ್ಳಿ ಸಿಗುತ್ತದೆ. ಈ ಊರನ್ನು ಕುರುಡಿಹಳ್ಳಿ ತಾಂಡ ಎಂತಲೂ ಕರೆಯುತ್ತಾರೆ. ಇಲ್ಲಿ ನೂರ ಐವತ್ತು ಮನೆಗಳಿವೆ. ಲಂಬಾಣಿಗರು ಬಹುಸಂಖ್ಯೆಯಲ್ಲಿದ್ದಾರೆ. ಚಿತ್ರದುರ್ಗ ಮಾರ್ಗವಾಗಿ ಹೋಗುವಾಗ ಈ ಹಳ್ಳಿ ಬರುತ್ತಲೂ ಒಂದು ಬಗೆಯ ಸೊಗಡಿನ ವಾಸನೆ ಮೂಗಿಗೆ ಬಡಿಯುತ್ತದೆ. ವಾಹನಗಳಲ್ಲಿನ ಜನರು ಮೂಗು ಮುಚ್ಚಿ ಈ ಊರನ್ನು ದಾಟುತ್ತಾರೆ. ಈ ವಾಸನೆ ಕೋಳಿಫಾರಂದೋ, ಪ್ಯಾಕ್ಟರಿಯದೋ ಅಂದುಕೊಂಡರೆ, ಅದು ಕತ್ತಾಳೆ ಪಟ್ಟೆಯನ್ನು ಹಿಂಡುವಿಕೆಯಿಂದ ಬಂದ ವಾಸನೆ. ಈ ಊರಿಗೇ ಊರೇ ಕತ್ತಾಳೆ ಪಟ್ಟೆಗಳನ್ನು ಮಿಷನ್ನಿನಲ್ಲಿ ಕಬ್ಬಿನಂತೆ ಹಿಂಡಿ ನಾರು ತೆಗೆಯುವ ಕೆಲಸ ನಂಬಿ ಬದುಕು ಕಟ್ಟಿಕೊಂಡಿದೆ. ಅಂಥ ಊರಿನ ಕಥನವಿದು.



ರಾಕ್ಷಸರ ಭುಜಪಟ್ಟಿಯಂತೆಯೂ, ಸುತ್ತಲೂ ಹಲಗುಳ್ಳ ದೊಡ್ಡ ದೊಡ್ಡ ಕತ್ತಿಯ ಆಕಾರನ್ನೂ ಹೊಂದಿದ ಕತ್ತಾಳೆ ಪಟ್ಟೆಗಳನ್ನು ರಾಕ್ಷಸ ಪಟ್ಟೆ ಎಂತಲೂ ಜನ ಕರೆಯುತ್ತಾರೆ. ಹೊಲಗಳ ಬದುವಲ್ಲಿ ಉಲುಸಾಗಿ ಬೆಳೆವ ಇದನ್ನು ರಕ್ಕಸಪಟ್ಟೆ, ಕತ್ತಾಳಿ ಎಂತಲೂ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿವೆ. ಈ ಪಟ್ಟೆಯು ಕತ್ತಿಯಂತೆ ಚೂಪಾಗಿರುತ್ತದೆ, ತನ್ನ ಮೈಯ ತುದಿಗೆಲ್ಲಾ ಚಿಕ್ಕ ಚಿಕ್ಕ ಮುಳ್ಳಿನ ಸರಪಳಿ ಹೊಂದಿ, ಕೊಬ್ಬಿದ ಗೂಳಿಯಂತೆ ಮುಟ್ಟಿದವರನ್ನು ಗಾಯ ಗೊಳಿಸಿಬಿಟ್ಟೇನು ಎಂದು ಗುಟುರು ಹಾಕುವಂತೆ ಕಾಣುತ್ತದೆ. ಹಾಗಾಗಿ ಪ್ರಾಣಿಗಳಿಂದ, ಜನರಿಂದ ಬೆಳೆಯ ರಕ್ಷಣೆಗಾಗಿ ಮತ್ತು ಮಣ್ಣಿನ ಸವಕಳಿ ತಡೆಯಲು ಕತ್ತಾಳೆಯನ್ನು ಹೊಲದ ಬದುವಲ್ಲಿ, ಅರಣ್ಯದಲ್ಲಿ ಉಲುಸಾಗಿ ಬೆಳೆಸುತ್ತಾರೆ. ಈಗೀಗ ಇದನ್ನು ಬೆಳೆಸುವಿಕೆಯ ಪ್ರಮಾಣ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಿದೆ. ಇದೊಂದು ರೀತಿಯಲ್ಲಿ ರಾಕ್ಷಸೀ ಗುಣಗಳಿರುವ ಗಿಡ. ಇದಕ್ಕೆ ಕಲ್ನಾರು ಎಂಬ ಹೆಸರೂ ಇದೆ. ಇದನ್ನು ಹಿಂಡಿದಾಗ ಬರುವ ವಾಸನೆ ಮಾತ್ರ ತಲೆ ಚಿಟ್ ಹಿಡಿಸುವಂತದ್ದು.

ಕತ್ತಾಳೆ ಅಮರಿಲ್ಲಿಡೇಸಿ ಕುಟುಂಬಕ್ಕೆ ಸೇರಿದ ಏಕದಳ ಸಸ್ಯ. ಇದು ಮೆಕ್ಸಿಕೋ ದೇಶದಿಂದ ಬಂದದ್ದು. ಸಾಮಾನ್ಯವಾಗಿ ಬಂಜರು ಪ್ರದೇಶ ಮತ್ತು ಉಷ್ಣವಲಯಗಳಲ್ಲಿ ಇದು ಯತೇಚ್ಚವಾಗಿ ಬೆಳೆಯುತ್ತದೆ. ಇದು ಯಾರನ್ನು ನೀರುಣಿಸಿ ಬೆಳೆಸಿ ಎಂದು ಬೇಡುವುದಿಲ್ಲ. ತಾನೇ ತಾನಾಗಿ ಬೆಳೆಯುತ್ತದೆ. ಹೀಗೆ ಬೆಳೆಯುತ್ತಾ ನಡುಮಧ್ಯೆ ಒಂದು ಕಾಂಡವಾಗಿ ಅಡಕೆಮರದ ಬೊಡ್ಡೆಯಂತೆ ಬೆಳೆಯುತ್ತದೆ. ಅದು ತುದಿಗೆ ಹೂಬಿಡುತ್ತದೆ. ಅದು ನೋಡಲು ಚೆಂದವಾಗಿ ಕಾಣುತ್ತದೆ. ಇದನ್ನು ಗುಡಿಸಲು ನೆರಕೆ ಕಟ್ಟಲು ಬಳಸುತ್ತಾರೆ. ಇದರ ಒಣಗಿದ ತುಂಡುಗಳನ್ನು ಬೆನ್ನಿಗೆ ಕಟ್ಟಿಕೊಂಡು ಈಜುಕಲಿಯಲು ಹುಡುಗರು ಬಳಸುತ್ತಾರೆ. ಬೆಳೆದ ಕೂದಲನ್ನು ಕತ್ತರಿಸುವಂತೆ ಕತ್ತಾಳೆಯ

ಎಲೆಗಳನ್ನು ಕತ್ತರಿಸಲಾಗುತ್ತದೆ. ಹಾಗೆ ಕತ್ತರಿಸಿದ್ದು ನಾರಾಗಿ ಮರುಜನ್ಮ ಪಡೆದು, ದನಗಳಿಗೆ ಹಗ್ಗವಾಗಿಯೋ, ತೇರಿಗೆ ಮಿಣಿಯಾಗಿಯೋ, ಬಣ್ಣಬಳಿಯುವ ಬ್ರಷ್ ಆಗಿಯೋ ತನ್ನ ಇರವನ್ನು ಕಾಯ್ದುಕೊಳ್ಳುತ್ತದೆ.

ಜನಸಮುದಾಯಗಳಲ್ಲಿ ಈ ಕತ್ತಾಳೆಗೊಂದು ಚರಿತ್ರೆಯೂ ಇದೆ. ಇದು ರೈತರೊಂದಿಗೆ ಸಾವಯವ ಸಂಬಂಧ ಹೊಂದಿದ ಸಸ್ಯಜಾತಿ. ಜನಪದ ವೈದ್ಯದಲ್ಲಿ ಔಷಧಿಗೂ ಬಳಕೆಯಾಗುತ್ತದೆ. ಹಳ್ಳಿಗಳಲ್ಲಿ ಗುಡಿಸಲು ಕಟ್ಟಲು ಸಹ ಬಳಸುತ್ತಾರೆ. ನಾನು ಚಿಕ್ಕವನಾಗಿದ್ದಾಗ ಕಟ್ಟಿಗೆ ತರಲೆಂದು ಹಳ್ಳಕ್ಕೆ ಹೋದಾಗ ಕಟ್ಟಿಗೆ ಹೊರೆ ಕಟ್ಟಲು ಕತ್ತಾಳೆಯ ಒಂದು ಪಟ್ಟೆಯನ್ನು ಕಿತ್ತುಕೊಂಡು ಅದನ್ನು ಸೀಳಿ ಹಗ್ಗ ಮಾಡಿಕೊಳ್ಳುತ್ತಿದ್ದೆವು. ಆಗ ಮನೆಗೆ ಬಂದಾಗ ನಮ್ಮ ಕೈಯ ಕೆಟ್ಟ ವಾಸನೆಯನ್ನು ಮೂಗಿಗೆ ಹಿಡಿಯುತ್ತಾ ಗೆಳೆಯರನ್ನೆಲ್ಲಾ ಓಡಾಡಿಸಿಕೊಂಡು ಖುಷಿ ಪಡುತ್ತಿದ್ದೆವು. ಇನ್ನು ಬುಗುರಿ ಆಡುವಾಗ ಬುಗುರಿಗೆ ಸುತ್ತುವ ಚಾಟಿಯನ್ನು ಇದೇ ನಾರಿನಿಂದ ಹೊಸೆದುಕೊಳ್ಳುತ್ತಿದ್ದೆವು. ಆಗ ಹೊಸೆಯುವಾಗ ತೊಡೆ ಮೇಲೆ ಒತ್ತಿ ಕೆಂಪಗಾಗಿ ತೊಡೆ ಉರಿಯುತ್ತಿತ್ತು. ಒಮ್ಮೆ ನಾನು ಬುಗುರಿಯ ಚಾಟಿಗಾಗಿ ರಾಮಯ್ಯ ಎನ್ನುವವರ ನೆರಕೆಯಲ್ಲಿ ಸಿಕ್ಕಿಸಿದ ನಾರನ್ನು ಕದ್ದು ಸಿಕ್ಕಿಬಿದ್ದು ದೊಡ್ಡ ರಂಪಾಟವಾಗಿತ್ತು.



ಆಗ ನಾವು ನಾರು ತೆಗೆಯಲು ಕತ್ತಾಳೆ ಪಟ್ಟೆಯನ್ನು ಕೊಯ್ದು, ನೀರು ಹರಿವ ಹಳ್ಳದ ಬದುವಲ್ಲಿ ಗುಣಿ ತೋಡಿ ರಾತ್ರಿ ಯಾರಿಗೂ ಗೊತ್ತಾಗದ ಹಾಗೆ ಹೂತಿಡುತ್ತಿದ್ದೆವು. ಕಾರಣ ಹೂತಿಟ್ಟ ಕತ್ತಾಳೆಯನ್ನು ಕದಿಯುವ ಕೆಲಸವನ್ನೂ ಕೆಲವರು ಮಾಡುತ್ತಿದ್ದರು. ಬಹುಪಾಲು ರೈತರು ನಾರಿಗಾಗಿ ಹೀಗೆ ಕತ್ತಾಳೆಯನ್ನು ಹಳ್ಳಗಳ ಬದುವಿನಲ್ಲಿ ಹೂತಿಡುವುದು ಒಂದು ಮುಖ್ಯ ಕೆಲಸವೇ ಆಗಿತ್ತು. ಆಗ ಹಳ್ಳಗಳಲ್ಲಿ ಒರತೆಯನ್ನು ತೋಡಿ ಕುಡಿಯಲು ನೀರು ಬಳಸುತ್ತಿದ್ದರಿಂದ, ಅಂತಹ ಕುಡಿಯುವ ನೀರ ಒರತೆಯ ಅಕ್ಕಪಕ್ಕ ಕತ್ತಾಳೆಯನ್ನು ಹೂತಿಡುವಂತಿರಲಿಲ್ಲ. ಹಾಗೇನಾದರೂ ಹೂತಿಟ್ಟರೆ ಕತ್ತಾಳೆಯ ಕೊಳೆತ ನೀರಿನಂಶ ಕುಡಿಯುವ ನೀರಿನ ಝರಿಯ ಜತೆ ಸೇರಿ ನೀರು ಕೆಟ್ಟ ವಾಸನೆ ಬರುತ್ತಿತ್ತು. ಆಗ ಜನರು ಕತ್ತಾಳೆ ನಾರು ಹೂತಿಟ್ಟ ಜಾಗವನ್ನು ಶೋಧಿಸಿ ತೆಗೆಯುತ್ತಿದ್ದರು. ಹೂತಿಟ್ಟವರು ಯಾರೆಂದು ತಿಳಿದರಂತೂ ಅವರಿಗೆ ಧರ್ಮದೇಟು ತಪ್ಪುತ್ತಿರಲಿಲ್ಲ.

ಹೀಗೆ ಹೂತು ಹಾಕಿದ್ದನ್ನು ಹದಿನೈದು ದಿನದ ನಂತರ ಕಿತ್ತಾಗ ಅದು ಕೊಳೆತು ನಾರು ಬಿಟ್ಟಿರುತ್ತಿತ್ತು. ಹೀಗೆ ತೆಗೆದ ಕೊಳೆತ ಕತ್ತಾಳಿಯನ್ನು ಬಟ್ಟೆ ತೊಳೆದಂತೆ, ನೀರಲ್ಲಿ ಅದ್ದಿ ಕಲ್ಲಿಗೆ ಸೆಳೆಯುತ್ತಿದ್ದೆವು. ಅದು ಪೊರೆಯನ್ನೆಲ್ಲಾ ಬಿಟ್ಟುಕೊಂಡು ಮುದುಕಿಯ ಬಿಳಿ ಕೂದಲಿನಂತೆ ಕಂಗೊಳಿಸುತ್ತಿತ್ತು. ಅದನ್ನು ಒಣಗು ಹಾಕಿದರೆ ನಾರು ಸಿದ್ದವಾಗುತ್ತಿತ್ತು. ಹೀಗೆಲ್ಲಾ ಮಾಡುವಾಗ ಅದರ ಕೆಟ್ಟವಾಸನೆಯನ್ನು ಸಹಿಸುವ ಭಂಡ ಧೈರ್ಯವೂ ಬೇಕಾಗುತ್ತಿತ್ತು. ಹಾಗೆ ಒಣಗಿದ ನಾರನ್ನು ಹೊಸೆದು ಹಸು, ಕುರಿ, ಎತ್ತು ಮುಂತಾದವುಗಳನ್ನು ಕಟ್ಟಲು ಹಗ್ಗಗಳನ್ನು ಹಿರಿಯ ಅಜ್ಜಂದಿರು ಹೊಸೆಯುತ್ತಿದ್ದರು. ಅಗತ್ಯಕ್ಕೆ ಬೇಕಾದ ತರಾವರಿ ಹಗ್ಗಗಳು ಈ ನಾರಿನಿಂದ ಸಿದ್ದಗೊಳ್ಳುತ್ತಿದ್ದವು.



ದೇಹದ ಮೇಲೆ ಚಿಕ್ಕ ಚಿಕ್ಕ ಕಪ್ಪನೆ ಹುಣ್ಣು ಏಳುವುದನ್ನು ಉತ್ತರ ಕರ್ನಾಟಕದ ಕೆಲ ಭಾಗಗಳಲ್ಲಿ ನಾರುಳ್ಳಿ ಎಂದು ಕರೆಯುತ್ತಾರೆ. ಈ ನಾರುಳ್ಳಿ ನಾರಪ್ಪ ಎಂಬ ದೇವರ ಕೋಪದಿಂದ ಬಂದದ್ದೆಂದು ಈ ಭಾಗದ ಜನ ನಂಬುತ್ತಾರೆ. ದಾವಣಗೆರೆ ಜಿಲ್ಲೆ ಹರಪನಹಳ್ಳಿಯ ಬಳಿಯಿರುವ ಚಿಗಟೇರಿಯ ನಾರದ ಮುನೇಶ್ವರ ದೇವರ ಜಾತ್ರೆಯಲ್ಲಿ ತೇರಿಗೆ ನಾರನ್ನು ಎಸೆಯುವುದಾಗಿ ಹರಕೆಯನ್ನೂ ಹೊರುತ್ತಾರೆ. ತೇರಿಗೆ ಬಾಳೆ ಹಣ್ಣು ಎಸೆಯುವಂತೆ ಈಗಲೂ ಚಿಗಟೇರಿ ನಾರಪ್ಪನಿಗೆ ನಾರು ಎಸೆಯುವುದನ್ನು ಕಾಣಬಹುದು. ಜನ ಎಸೆದ ನಾರು ತೇರು ಎಳೆವ ಮಣಿಯನ್ನು (ದೊಡ್ಡದಾದ, ದಪ್ಪದಾದ ಹಗ್ಗ) ಹೆಣೆಯಲು ಬಳಕೆಯಾಗುತ್ತದೆ. ಇದೆಲ್ಲಾ ಕತ್ತಾಳೆ ನಾರು ಜನರ ಸಂಸ್ಕೃತಿಯ ಭಾಗವೂ ಆದದ್ದರ ಕುರುಹು.

ಹೀಗೆ ಕತ್ತಾಳೆಯನ್ನು ಕೊಳೆ ಹಾಕಿ ನಾರು ತೆಗೆವ ಸಾಂಪ್ರದಾಯಿಕ ವಿಧಾನವನ್ನು ಬಿಡಿಸಿಕೊಂಡು, ನಂದನಹಳ್ಳಿ ತಾಂಡದ ಜನ ಯಂತ್ರದ ಮೂಲಕ ನಾರು ತೆಗೆವ ಕೆಲಸ ಮಾಡುತ್ತಿದ್ದಾರೆ. ಈಗ್ಗೆ ಇಪ್ಪತ್ತು ವರ್ಷಗಳ ಹಿಂದಿನಿಂದಲೂ ಇದನ್ನೊಂದು ಮುಖ್ಯ ಉದ್ಯೋಗವನ್ನಾಗಿಸಿಕೊಂಡಿದ್ದಾರೆ. ಹಿಂದೆ ಐವತ್ತಕ್ಕೂ ಹೆಚ್ಚು ಯಂತ್ರಗಳಿದ್ದವಂತೆ, ಈಗ ಇಪ್ಪತ್ತೈದು ಯಂತ್ರಗಳು ನಾರು ತೆಗೆವ ಕೆಲಸ ಮಾಡುತ್ತಿವೆ. ಒಂದು ಯಂತ್ರ ಕನಿಷ್ಟ ಇಪ್ಪತ್ತು ಜನರಿಗೆ ಉದ್ಯೋಗ ಒದಗಿಸುತ್ತದೆ. ಇದೊಂದು ಸಂಚಾರಿಯಂತ್ರ. ಎಲ್ಲೆಲ್ಲಿ ಕತ್ತಾಳೆ ಯಥೇಚ್ಚವಾಗಿ ಬೆಳೆದಿರುತ್ತದೋ ಅಲ್ಲಲ್ಲಿಗೇ ಯಂತ್ರವನ್ನು ಕೊಂಡೊಯ್ದು ನಾರು ತೆಗೆವ ಕೆಲಸ ಮಾಡುತ್ತಾರೆ. ಹಾಗಾಗಿ ಕರ್ನಾಟಕದ ಬಹುಭಾಗಗಳಲ್ಲಿಯೂ, ಮಹರಾಷ್ಟ್ರ, ಆಂದ್ರ, ತಮಿಳು ನಾಡಿನ ಕೆಲ ಭಾಗಗಳಲ್ಲೂ ನಂದನಹಳ್ಳಿಯ ನಾರು ಯಂತ್ರಗಳು ಪಯಣ ಬೆಳೆಸಿವೆ.



ಹೊಲದವರೇ ತಮ್ಮ ಬದುವಲ್ಲಿರುವ ಕತ್ತಾಳೆ ಪಟ್ಟೆಯನ್ನು ಕೊಟ್ಟು ಇಂತಿಷ್ಟು ನಾರು ಪಡೆಯಬಹುದು. ಇಲ್ಲದೆ ಹೋದರೆ ೩೦೦ ರೂಪಾಯಿಗೊಂದು ಟ್ರಾಕ್ಟರ್ ಲೋಡ್ ನಂತೆ ಹೊಲಬದುವಿನ ಕತ್ತಾಳೆಯನ್ನು ಕೊಳ್ಳುತ್ತಾರೆ. ಹೀಗೆ ಕೊಯ್ದ ಕತ್ತಾಳೆ ಪಟ್ಟೆಗಳನ್ನು ಮಿಷನ್ನಿನ ಬಾಯಿಗೆ ಇಡುತ್ತಾರೆ, ಅದು ಮಾವಿನ ಹಣ್ಣಿನ ಹೋಳನ್ನು ಚೀಪಿ ಸಿಪ್ಪೆಯನ್ನು ಎಸೆಯುವಂತೆ ಅದರ ಕತ್ತಾಳೆಯ ರಸ ಹೀರಿ ಹಸಿ ನಾರನ್ನು ಹೊರ ಹಾಕುತ್ತದೆ, ಹೀಗೆ ಹೊರ ಹಾಕಿದ ನಾರನ್ನು ಬಿಸಿಲಿಗೆ ಒಣಗು ಹಾಕಲಾಗುತ್ತದೆ. ಹೀಗೆ ಒಣಗು ಹಾಕಿದ ಬಿಳಿ ನಾರು

ನೂರಾರು ಅಜ್ಜಿಯರು ತಮ್ಮ ಬಿಳಿ ಕೂದಲನ್ನು ಮಾತ್ರ ಮೇಲೆ ಬಿಟ್ಟು ಭೂಮಿಯ ಒಳಗೆ ಅವಿತಿದ್ದಾರೆಂಬತೆ ಕಾಣುತ್ತದೆ. ಎರಡು ಮೂರು ದಿನ ಒಣಗಿದಾಗ ನಾರು ಸಿದ್ದವಾಗುತ್ತದೆ.

ಒಣಗಿದ ನಾರನ್ನು ಪೆಂಡಿಕಟ್ಟುತ್ತಾರೆ. ಅಂತಹ ಪೆಂಡಿಗಳನ್ನು ತೂಕ ಮಾಡಿ ಲಾರಿಗೆ ತುಂಬುತ್ತಾರೆ. ತಿಪಟೂರು ಗುಬ್ಬಿಯ ಬಳಿ ಇರುವ ಹಗ್ಗದ ಪ್ಯಾಕ್ಟರಿಗೆ ಕೆಲವರು ಮಾರಿದರೆ, ಇನ್ನು ಕೆಲವರು ಕೊಲ್ಕತ್ತಾ, ಬಾಂಬೆಯ ಹಗ್ಗದ ಪ್ಯಾಕ್ಟರಿಗಳಿಗೆ ಸಾಗಿಸುತ್ತಾರೆ. ಈಗ ೧೪ ರೂಪಾಯಿಗೆ ಕೆಜಿಯಂತೆ ಮಾರಾಟ ಮಾಡಲಾಗುತ್ತಿದೆ. ಬೆಲೆಯಲ್ಲಿ ಏರುಪೇರಾಗುವ ಸಾದ್ಯತೆಗಳೂ ಇವೆ. ಕತ್ತಾಳೆಯನ್ನು ಹಿಂಡಿ ತೆಗೆದ ರಸ ಮತ್ತು ಅದರ ಪೊರೆಯ ಕಸ ಹೊಲಕ್ಕೆ ಫಲವತ್ತಾದ ಗೊಬ್ಬರವಂತೆ. ಹಾಗಾಗಿ ಈ ಗೊಬ್ಬರವನ್ನು ಕೊಳ್ಳಲು ತುಂಬಾ ಬೇಡಿಕೆ ಇದೆ. ಹೀಗೆ ನಾರು ತೆಗೆವ ಕೆಲಸ ಮಳೆಗಾಲದ ನಾಲ್ಕು ತಿಂಗಳು ಮಾತ್ರ ನಿಲ್ಲುತ್ತದೆ. ಕಾರಣ ಮಳೆಗೆ ಕತ್ತಾಳೆ ನೆನೆದರೆ ಬೆಂಡಾಗುತ್ತದೆ, ನಾರು ನೆನೆದು ಕಪ್ಪಾಗುತ್ತದೆ ಎನ್ನುವುದು ಇಲ್ಲಿನ ಅನುಭವಿಗಳ ಮಾತು.



ನಾರನ್ನು ಒಣಗಿಸುವ, ಕೂಡಿಡುವ ಕೆಲಸಕ್ಕೆ ದಿನಕ್ಕೆ ೧೦೦ ರಿಂದ ೨೦೦ ರೂಪಾಯಿ ಕೊಡ್ತಾರೆ ಸಾರ್ ಎನ್ನುವ ಜಾನುಬಾಯಿ 'ನಮ್ಮ ಜೀವನ್ಕ ಈ ಕತ್ತಾಳಿ ನಾರು ಆಸರಿ ಆಗೇತ್ರಿ' ಎನ್ನುತ್ತಾರೆ. ಇದರಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿದೆ. ನಂದನಹಳ್ಳಿಯ ರಾಮಾನಾಯ್ಕ ಮುಂತಾದವರು ನಾರಿನ ಮಿಷನ್ ಹೊಂದಿದ್ದಾರೆ. ಇದಕ್ಕೆ ಸರಕಾರದ ನಾರು ಮಂಡಳಿಯಾಗಲಿ, ಇತರೆ ಗುಡಿ ಕೈಗಾರಿಕೆಯ ಯೋಜನೆಗಳಾಗಲಿ ಸಹಾಯ ಮಾಡಿಲ್ರಿ..ನಮಗ ಸಾಲ ಕೊಡೋಕೆ ಬ್ಯಾಂಕುಗಳು ಮುಂದೆ ಬರೋದು ಕಷ್ಟರೀ ಎನ್ನುತ್ತಾರೆ. ನಂದನಹಳ್ಳಿಯಲ್ಲಿರೋ ಹಗ್ಗದ ಸಣ್ಣ ಪ್ಯಾಕ್ಟರಿಯೊಂದು ಕೆಲಸ ಮಾಡದೆ ಹಾಳು ಬಿದ್ದಿರುವುದೂ ಕೂಡ ಹಣಕಾಸಿನ ಕೊರತೆಯಿಂದಲೇ ಎನ್ನುವುದು ಈ ಊರಿನವರ ಅಭಿಪ್ರಾಯ.

ಹೀಗೆ ಹೊಲದ ಬದುವಲ್ಲಿ ಸುಖಾಸುಮ್ಮನೆ ದೈತ್ಯಾಕಾರದಲ್ಲಿ ಬೆಳೆವ ಕತ್ತಾಳೆಯನ್ನು ನಂಬಿ ಒಂದು ಊರು ಬದುಕು ಕಟ್ಟಿಕೊಂಡಿರುವುದು ಅಚ್ಚರಿಯೇ ಸರಿ. ಈ ಪುಟ್ಟ ಹಳ್ಳಿ ನಾರನ್ನು ಕೊಲ್ಕತ್ತಾ ಬಾಂಬೆಯಂತಹ ಮಹಾ ನಗರಗಳ ದೊಡ್ಡ ಪ್ಯಾಕ್ಟರಿಗಳಿಗೆ ಕಳಿಸುತ್ತಿರುವುದಕ್ಕೆ ಹೆಮ್ಮೆ ಪಡುತ್ತಿದೆ. ಆದರೆ ಇಲ್ಲಿನ ನಾರಿನ ಕಚ್ಚಾ ಸಾಮಗ್ರಿಯನ್ನು ಆಧರಿಸಿ ಉತ್ಪನ್ನಗಳನ್ನು ತಯಾರಿಸುವ ಸಣ್ಣ ಕೈಗಾರಿಕೆಯೊಂದು ಸ್ಥಾಪನೆಯಾದರೆ ಈ ಹಳ್ಳಿಯ ಇನ್ನಷ್ಟು ಜನ ಸಂಪೂರ್ಣವಾಗಿ ನಾರೋದ್ಯಮದಲ್ಲೇ ತೊಡಗಿಕೊಳ್ಳುವ ಕನಸು ಕಾಣುತ್ತಿದೆ. ನಂದನಹಳ್ಳಿ ಜನರ ಇಂತಹ ಕನಸು ನನಸಾಗುವುದು ಯಾವಾಗ ಎನ್ನುವುದು ನನ್ನಂತವರಲ್ಲಿ ಪ್ರಶ್ನೆಯಾಗಿ ಕಾಡುತ್ತದೆ.

# ನಿಷ್ಠಾವಂತ ಸಮಾಜವಾದಿ ಹೋರಾಟಗಾರ: ದಾಸನ್ ಸಾಲೊಮನ್

**ದಾಸನ್ ಅವರ ಹುಡುಕಾಟದಲ್ಲಿ...**

ದಾಸನ್ ಸಾಲೊಮನ್ ಅವರ ಹೆಸರನ್ನು ಮೊದಲ ಬಾರಿ ಕೇಳಿದ್ದು ಸಂಡೂರು ಭೂ ಹೋರಾಟ ಪುಸ್ತಕ ಬರೆಯುವ ಸಂದರ್ಭದಲ್ಲಿ . ಆಗ ಸಂಡೂರು ಭೂ ಹೋರಾಟದ ಬಗೆಗಿನ ಮಾಹಿತಿಯನ್ನು ಹುಡುಕಿಕೊಂಡು ಬೆಂಗಳೂರಿನ ಪತ್ರಗಾರ ಇಲಾಖೆಗೆ ಹೋಗಿದ್ದೆ. ಅಲ್ಲಿ ಯಜಮಾನ ಶಾಂತರುದ್ರಪ್ಪ ಅವರ ವೈಯಕ್ತಿಕ ಸಂಗ್ರಹದ ಮಾಹಿತಿಯನ್ನು ತಿರುವಿ ಹಾಕುವಾಗ ಸಾಲೊಮನ್ ಹೆಸರು ಅಲ್ಲಲ್ಲಿ ಉಲ್ಲೇಖವಾಗಿತ್ತು. ಆ ನಂತರ ಅವರ ಬಗ್ಗೆ ಕುತೂಹಲ ಹೆಚ್ಚಿತು. ಸಂಡೂರು ಹೋರಾಟದ ಸಂದರ್ಭದಲ್ಲಿ ತುಂಬಾ ಸಕ್ರಿಯವಾಗಿ ಭಾಗವಹಿಸಿ ಹೋರಾಟದ ಯಶಸ್ಸಿಗೆ ಕಾರಣವಾದವರಲ್ಲಿ ಸಾಲೊಮನ್ ಪ್ರಮುಖರು ಎಂದು ತಿಳಿಯಿತು.

ಆ ನಂತರ ಸಾಲೊಮನ್ ಅವರ ಹುಡುಕಾಟವನ್ನು ಮತ್ತೂ ಮುಂದುವರೆಸಿದೆ. ಅವರ ಮನೆ ಬಳ್ಳಾರಿಯ ಗ್ಲಾಸ್ ಬಜಾರಿನಲ್ಲಿತ್ತು ಎನ್ನುವ ಮಾಹಿತಿಯ ಎಳೆ ಹಿಡಿದು ಹುಡುಕ ಹೊರಟಾಗ, ಅವರ ಮಗ ಚಂದ್ರನ್ ಸಾಲೊಮನ್ ಸಿಕ್ಕರು. ಮೂರಂತಸ್ತಿನ  ಮೇಲಿನ ಮನೆಯಲ್ಲಿ, ಸಾಲೊಮನ್ ಅವರು ಕೋಟು ಕನ್ನಡಕ ಹಾಕಿದ ದೊಡ್ಡ ಛಾಯಚಿತ್ರವೊಂದು ಕಂಡಿತು. ಆ ಮುಖದಲ್ಲಿ ವಿಪರೀತ ದಣಿವಿರುವಂತೆಯೂ, ಮತ್ತೊಮ್ಮೆ ನೋಡಿದರೆ ಎಂಥದೋ ತೇಜಸ್ಸಿರುವಂತೆಯೂ ಕಂಡರು.  ಬಹುಶಃ ಆ ತನಕ ಸಾಲೊಮನ್ ಅವರ ಚಿತ್ರವೊಂದು ನನ್ನ ಕಣ್ಣಮುಂದೆ ಬಂದಿರಲಿಲ್ಲ.

ಅವರ ಮಗ ಚಂದ್ರನ್ ನಿಧಾನಕ್ಕೆ ದಾಸನ್ ನೆನಪುಗಳನ್ನು ಮೆಲಕು ಹಾಕತೊಡಗಿದರು. ಅಪ್ಪನ ನೆನಪುಗಳನ್ನು ಚಂದ್ರನ್ ಅಷ್ಟಾಗಿ ಉಳಿಸಿಕೊಂಡಂತಿರಲಿಲ್ಲ. ನೆನಪುಗಳು ಅಷ್ಟು ನಿಚ್ಚಳವಾಗಿಲ್ಲ ಅನ್ನಿಸತೊಡಗಿತು. ನಂತರ ನಾನು ಭೇಟಿಯಾದದ್ದು ಹೆಚ್.ಕೆ ಶಾಂತಾ ಎನ್ನುವ ಸಾಲೊಮನ್ ಅವರ ಆಪ್ತ ಸಹಾಯಕಿಯನ್ನು. ಅವರಿಗೆ ಈಗ ಸರಿಸುಮಾರು ಎಪ್ಪತ್ತು ವರ್ಷದ ಆಸುಪಾಸು. ಬಳ್ಳಾರಿಯ ತಾಲೂಕು ಕಛೇರಿಯ ಎದುರು ಅರ್ಜಿ ಬರೆಯುತ್ತಾ, ದಿನದ ದುಡಿಮೆ ಮಾಡುತ್ತಿದ್ದ ಈ ಅಜ್ಜಿಯ ಬಳಿ ಸಾಲೊಮನ್ ಹೆಸರು ಹೇಳಿದಾಕ್ಷಣ ಮಿಂಚಿನ ಸಂಚಾರವಾದಂತಾಗಿ, ಆಕೆಯ ಕಣ್ಣುಗಳು ಒದ್ದೆಯಾದವು.

ಸಾಲೊಮನ್ ಅವರ ಬಗೆಗಿನ ನೆನಪಿನ ನಿಧಿ ಈ ಅಜ್ಜಿ ಅನ್ನಿಸತೊಡಗಿತು. ಕೋಟೆಯ ಬಳಿ ಇರುವ ಅವರ ಮನೆಯಲ್ಲಿ ಮಾತನಾಡಿಸುತ್ತಾ ಹೋದಂತೆ ದಾಸನ್ ಅವರ ಬದುಕಿನ ಮಗ್ಗಲುಗಳು ಒಂದೊಂದಾಗಿ ಬಿಚ್ಚಿಕೊಳ್ಳತೊಡಗಿದವು. ಸಾಲೊಮನ್ ಅವರ ಸ್ನೇಹಿತರಾದ ಕೆ. ರಾಮದಾಸ್ ಅವರು( ಸುಪ್ರೀಂ ಕೋರ್ಟ ಲಾಯರ್ ಆಗಿದ್ದರಂತೆ, ಈಗ ಅವರು ಇಲ್ಲ) 'ಡೊಮೆಸ್ಟಿಕ್ ಎನ್‌ಕ್ವಯಿರೀಸ್' ಎನ್ನುವ ಪುಸ್ತಕ ಬರೆದು ಅದನ್ನು ದಾಸನ್ ಅವರಿಗೆ ಅರ್ಪಿಸಿದ್ದಾರೆ. ಆ ಕೃತಿಯಲ್ಲಿ ದಾಸನ್ ಬಗ್ಗೆ ಬರೆದಿದ್ದರು ಎನ್ನುವ ಮಾಹಿತಿ ಇದೆ. ಆದರೆ ಆ ಕೃತಿ ಈಗ ಅಲಭ್ಯ. ಹೀಗೆ ಸಾಲೊಮನ್ ಅವರ ನೆನಪಿನ ಪೆಟ್ಟಿಗೆಗೆ ಬೀಗ ಹಾಕಿಕೊಂಡಿದ್ದವರನ್ನೆಲ್ಲಾ ಮಾತನಾಡಿಸುತ್ತಾ ಹೋದಂತೆ ಅವರ ವ್ಯಕ್ತಿತ್ವದ ಚಿತ್ರಗಳು ಒಂದೊಂದಾಗಿ ನಿಚ್ಚಳವಾಗತೊಡಗಿದವು.

**ಬಾಲ್ಯ ಮತ್ತು ಬದುಕು**



ದಾಸನ್ ಅವರ ಪೂರ್ಣ ಹೆಸರು ಆಂಥೋನಿ ಕ್ಲೆಮೆಂಟ್ ಜೇಸುದಾಸನ್ ಸಾಲೊಮನ್. ಈತ ಶ್ರೀಮತಿ ಮತ್ತು ಶ್ರೀ ಸಾಲೊಮನ್ ಅವರ ಮಗನಾಗಿ ೧೯೧೫ ರ ಜುಲೈ ೭ ರಂದು ಜನಿಸಿದರು. ಬಳ್ಳಾರಿಯ ವಾರ್ಡ್ಲಾ ಸ್ಕೂಲಿನಲ್ಲಿ ಪ್ರತಿಭಾವಂತ ವಿಧ್ಯಾರ್ಥಿಯಾಗಿ ಬೆಳೆದರು. ಕಾಲೇಜು ಶಿಕ್ಷಣ ಸರಕಾರಿ ಕಲಾ ಕಾಲೇಜ್ ಅನಂತಪುರದಲ್ಲಿ ಮುಗಿಯಿತು. ಓದುವುದರಲ್ಲಿಯೂ, ಕ್ರೀಡೆಯಲ್ಲಿಯೂ ದಾಸನ್ ಪ್ರಖರ ಪ್ರತಿಭೆಯನ್ನು ಹೊಂದಿದ್ದರು. ಹಾಗಾಗಿ ಬಾಲ್ಯದಲ್ಲಿ ಎಲ್ಲರ ಗಮನಸೆಳೆದರು. ಆದರೆ ಇವರ ಪ್ರಖರ ಬುದ್ದಿವಂತಿಕೆಯನ್ನು ಜನರ ನೋವು, ಅಸಮಾನತೆಗಳು ಸೆಳೆದವು. ಹಾಗಾಗಿ ಓದನ್ನು ಮುಂದುವರಿಸದೆ ಜನರ ಪರವಾಗಿ ದುಡಿಯುವ ಕೆಲಸದಲ್ಲಿ ಮುಳುಗಿದರು. ಬಹುಶಃ ಅವರ ಬಾಲ್ಯವು ಸ್ವತಂತ್ರ್ಯ ಚಳವಳಿಯ ಪ್ರಭಾವಕ್ಕೆ ತೀವ್ರವಾಗಿ ಸ್ಪಂದಿಸಿದಂತೆ ಕಾಣುತ್ತದೆ. ಹಾಗಾಗಿ ಅವರಿಗೆ ಓದು ಬರಹ ಎನ್ನುವುದಕ್ಕಿಂತ ಜನರ ಜತೆ ಬೆರೆಯುವುದು ಜನರ ಕಷ್ಟಗಳಿಗೆ ಸ್ಪಂದಿಸುವುದೇ ಮುಖ್ಯ ಎನ್ನುವಂತಾಗಿತ್ತು.

ದಾಸನ್ ಅವರದು ತುಂಬು ಸಂಸಾರ. ಒಬ್ಬ ಗಂಡುಮಗ, ಐದು ಜನ ಹೆಣ್ಣುಮಕ್ಕಳಿದ್ದರು. ದಾಸನ್ ಕುಟುಂಬದ ಬಗೆಗಿನ ಕಾಳಜಿಗಿಂತ ಸಮಾಜದ ಮೇಲಿನ ಕಾಳಜಿಯೇ ಹೆಚ್ಚಾಗಿ ಮನೆಯವರು ಇವರನ್ನು ಕಡೆಗಣಿಸಿದರು ಎಂದು ಶಾಂತಮ್ಮ ಹೇಳುತ್ತಾರೆ. ಅವರ ಮಗ ಚಂದ್ರನ್ ಅವರ ಮಾತಲ್ಲಿಯೂ ಈ ಭಾವ ಇತ್ತಾದರೂ ಅದನ್ನವರು ಸ್ಪಷ್ಟವಾಗಿ ಕಾಣಿಸಲಿಲ್ಲ. ಇವರು ರೆವೆನ್ಯು ಇನ್ಸ್‌ಪೆಕ್ಟರ್ (ಆರ್.ಐ) ಆಗಿ ಸರ್ಕಾರಿ ಸೇವೆಗೆ ಸೇರಿದರು. ಆದರೆ ಈ ಹುದ್ದೆಯಲ್ಲಿ ಹೆಚ್ಚು ಕಾಲ ಮುಂದುವರೆಯಲಿಲ್ಲ. ಅಥವಾ ಅವರು ನಂಬಿದ ಸಿದ್ಧಾಂತ ಮತ್ತು ಹೋರಾಟದ ಬದುಕಿಗೆ ಈ ಹುದ್ದೆ ಸಹಕರಿಸಲಿಲ್ಲ ಎಂದು ಕಾಣುತ್ತದೆ. ೧೯೫೫ ರಲ್ಲಿ ಅವರು ಆರ್. ಐ ಹುದ್ದೆಗೆ ರಾಜಿನಾಮೆ ನೀಡಿದರು. ಅಲ್ಲಿಂದ ತುಂಬು ಸಂಸಾರದ ಜವಾಬ್ದಾರಿಯನ್ನು ದಾಸನ್ ಅವರ ಹೆಂಡತಿ ನಿಭಾಯಿಸಿದರು.

## ಸ್ವಾತಂತ್ರ್ಯ ಚಳವಳಿ

ದಾಸನ್ ವಿದ್ಯಾರ್ಥಿ ದೆಸೆಯಲ್ಲಿಯೇ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು. ಅವರ ಇಪ್ಪತ್ತನೇ ವಯಸ್ಸಿನಲ್ಲಿ ಭಾರತದಲ್ಲಿ ಗಾಂಧೀಜಿಯವರ ನಾಯಕತ್ವದ ಸ್ವಾತಂತ್ರ್ಯ ಚಳವಳಿ ತುಂಬಾ ತೀವ್ರವಾಗಿತ್ತು. ಅವರ ಅಸಹಕಾರ ಚಳವಳಿ, ಉಪ್ಪಿನ ಸತ್ಯಾಗ್ರಹ, ಮುಂತಾದವು ಬಿಸಿರಕ್ತದ ಯುವಕರನ್ನು ತೀವ್ರವಾಗಿ ಆಕರ್ಷಿಸಿದವು. ಇದು ಸಹಜವಾಗಿ ದಾಸನ್ ಅವರನ್ನು ಪ್ರಭಾವಿಸಿರಲಿಕ್ಕೆ ಸಾಧ್ಯವಿದೆ. ಆ ಕಾಲದಲ್ಲಿ ದಾಸನ್ ಪಿಕೆಟಿಂಗ್ ಮುಂತಾರ ಬ್ರಿಟೀಶ್ ವಿರೋಧಿ ಚಳವಳಿಯಲ್ಲಿ ಭಾಗವಹಿಸಿದ ಕಾರಣಕ್ಕೆ ಆಂಗ್ಲರ ಕೆಂಗಣ್ಣಿಗೆ ಗುರಿಯಾಗಿದ್ದರು.



ಬಳ್ಳಾರಿ ಜಿಲ್ಲೆಯಲ್ಲಿ ಸ್ವತಂತ್ರ್ಯ ಹೋರಾಟವನ್ನು ತೀವ್ರಗೊಳಿಸಿದವರಲ್ಲಿ ದಾಸನ್ ಕೂಡಾ ಒಬ್ಬರು. ೧೯೪೨ ರ ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ದಾಸನ್ ಪೋಲೀಸರ ಹೊಡೆತದಿಂದ ತೀವ್ರವಾಗಿ ಗಾಯಗೊಂಡ ಬಗ್ಗೆ ಯಜಮಾನ ಶಾಂತರುದ್ರಪ್ಪ ಅವರು ಬರೆಯುತ್ತಾರೆ. ಒಂದಕ್ಕಿಂತ ಹೆಚ್ಚು ಬಾರಿ ದಾಸನ್ ಬ್ರಿಟೀಶ್‌ರಿಂದ ಬಂದಿತರಾಗಿ ಜೈಲು ವಾಸವನ್ನು ಅನುಭವಿಸಿದರು. ನೀಲಂ ಸಂಜೀವರೆಡ್ಡಿ ಇವರೊಂದಿಗೆ ಜೈಲು ವಾಸದಲ್ಲಿ ಜತೆಗಿದ್ದರು. ಇಲ್ಲಿಂದಲೇ ಸಾಲೊಮನ್ ಅವರ ಹೋರಾಟದ ಬದುಕು ಆರಂಭವಾದಂತೆ ಕಾಣುತ್ತದೆ.

**ಭೂ ಹೋರಾಟ**

ದಾಸನ್ ಅವರು ಮೂಲತಃ ಸಮಾಜವಾದಿ ಆಶಯಗಳಿಂದ ಪ್ರಭಾವಿತರಾದವರು. ಹಾಗಾಗಿ ಭಾರತದಲ್ಲಿ ೧೯೩೪ ರ ನಂತರ ಸಮಾಜವಾದಿ ಪಕ್ಷ ರೂಪಿಸುತ್ತಿದ್ದ ರೈತ ಹೋರಾಟಗಳು ಸಹಜವಾಗಿ ಸಮಾಜವಾದಿ ಆಶಯಗಳಿರುವ ಸಂಗಾತಿಗಳನ್ನು ಗಮನ ಸೆಳೆಯುತ್ತಿತ್ತು. ಮತ್ತು ಭೂ ಹೋರಾಟವನ್ನು ರೂಪಿಸುವಂತೆ ಪ್ರೇರೇಪಿಸುತ್ತಿತ್ತು. ದಾಸನ್ ಅವರು ಕಾಗೋಡು ರೈತ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಎಂದು ಗೋಪಾಲಗೌಡರೊಂದಿಗೆ ನಡೆಸಿದ ಪತ್ರ ವ್ಯವಹಾರದಲ್ಲಿ ತಿಳಿಯುತ್ತದೆ. ಕಾಗೋಡಿನ ರೈತ ಹೋರಾಟವನ್ನು ಸಮಾಜವಾದಿ ರೈತ ಹೋರಾಟವನ್ನಾಗಿ ರೂಪಿಸುವಲ್ಲಿ ದಾಸನ್ ಪಾತ್ರವೂ ಇತ್ತು.

೧೯೭೩ ರಲ್ಲಿ ನಡೆದ ಸಂಡೂರು ಭೂ ಹೋರಾಟವನ್ನು ರೂಪಿಸಿದ ಮೊದಲಿಗರಲ್ಲಿ ದಾಸನ್ ಕೂಡ ಪ್ರಮುಖರು. ಸೋಷಲಿಸ್ಟರು ಸೊಂಡೂರಿನಲ್ಲಿ ಚಳವಳಿ ಮಾಡುವುದಾಗಿ ನಿರ್ಧರಿಸಿದಾಗ, ಅದರ ರೂಪುರೇಷೆಗೆ ಹೊಸಪೇಟೆಯಲ್ಲಿ ಜನವರಿ ೩೦, ೧೯೭೩ರಲ್ಲಿ ಒಂದು ಸಭೆ ನಡೆಯಿತು. ಈ ಸಭೆಯ ನಿರ್ಣಯದಲ್ಲಿ ಸೊಂಡೂರಿನ ಮಾಜಿ ರಾಜರು ಮತ್ತು ಎಂ.ವೈ.ಘೋರ್ಪಡೆಯವರು ರೈತರ ಜಮೀನನ್ನು ತಮ್ಮ ವಶದಲ್ಲೇ ಇಟ್ಟುಕೊಂಡಿರುವುದನ್ನು ಪ್ರತಿಭಟಿಸಿ ಆ ಜಮೀನಿನ ವಿಮೋಚನೆಗಾಗಿ "ಸೊಂಡೂರು ಸಂಗ್ರಾಮ ಸಿದ್ಧತಾ ಸಮಿತಿ"ಯನ್ನು ರಚಿಸಿದರು. ಅದರಲ್ಲಿ ಕೆ.ಜಿ.ಮಹೇಶ್ವರಪ್ಪ, ಎಸ್. ವೆಂಕಟರಾಂ, ದಾಸನ್ ಸಾಲೋಮನ್, ಎಂ.ವೈ.ಆರ್ ಪರಮೇಶ್ವರಪ್ಪ, ಎಸ್.ಎಸ್.ಕುಮುಟ ಮತ್ತು ಕೋಣಂದೂರು ಲಿಂಗಪ್ಪ ಇವರುಗಳನ್ನು ಸಮಿತಿಯ ಸದಸ್ಯರುಗಳನ್ನಾಗಿ ನಿರ್ಣಯಿಸಲಾಯಿತು. ಈ ಸಭೆಯಲ್ಲಿ ಸ್ಥಳೀಯ ಕಾಂಗ್ರೆಸಿಗರನ್ನು ಪಕ್ಷ ಖಂಡಿಸಿತು. ಇದೇ ಸಭೆಯಲ್ಲಿ ಹೂವಿನಹಡಗಲಿಯಲ್ಲಿ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮಾವೇಶ ಮಾಡಲು ನಿರ್ಧರಿಸಲಾಯಿತು.

ದಾಸನ್ ಅವರು ಸಂಡೂರು ಭೂ ಹೋರಾಟದಲ್ಲಿ ತುಂಬಾ ಸಕ್ರಿಯವಾಗಿ ಭಾಗವಹಿಸಿದರು. ಜಾರ್ಜ ಫರ್ನಾಂಡೀಸ್ ಅವರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದರಿಂದಾಗಿ, ಇಡೀ ಸಂಡೂರು ಹೋರಾಟದ ಮಾಹಿತಿಯನ್ನು ಜಾರ್ಜ ಅವರಿಗೆ ತಿಳಿಸುತ್ತಾ ಅದರ ರೂಪುರೇಷೆಗಳ ಬಗ್ಗೆ ಚರ್ಚಿಸುತ್ತಿದ್ದರು. ಕಾನೂನಿನ ವಿಷಯದಲ್ಲಿ ಇವರು ಆಳವಾದ ಜ್ಞಾನವನ್ನು ಹೊಂದಿದ್ದರಿಂದಾಗಿ ಹೋರಾಟಕ್ಕೆ ಬೇಕಾದ ಕಾನೂನಿನ ಚೌಕಟ್ಟನ್ನು ತುಂಬಾ ಜಾಣ್ಮೆಯಿಂದ ನಿರ್ವಹಿಸಿದರು. ಹೀಗಾಗಿ ದಾಸನ್ ಅವರು ಸಂಡೂರು ಭೂ ಹೋರಾಟದ ಯಶಸ್ಸಿನಲ್ಲಿಯೂ ಪ್ರಮುಖ ಪಾತ್ರ ವಹಿಸಿದರು. ಆದರೆ ಈ ಹೋರಾಟ ಯಶಸ್ಸಿನಲ್ಲಿ ಇವರ ಪಾತ್ರವನ್ನು ಅಷ್ಟಾಗಿ ಮೇಲ್ ಸ್ತರಕ್ಕೆ ತರದೆ ಗೌಣಗೊಳಿಸಲಾಯಿತು.

**ಕಾರ್ಮಿಕ ನಾಯಕ**

ದಾಸನ್ ಅವರು ನಿಜಾರ್ಥದಲ್ಲಿ ಕರ್ನಾಟಕದ ಬಹುದೊಡ್ಡ ಕಾರ್ಮಿಕ ನಾಯಕ. ಎಪ್ಪತ್ತರ ದಶಕದಲ್ಲಿ ಕರ್ನಾಟಕ ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಕೆ.ಜಿ ಮಹೇಶ್ವರಪ್ಪ ಸಾಲೊಮನ್ ಅವರ ಬಗ್ಗೆ ಹೇಳುವ ಮಾತು ಹೀಗಿದೆ: ' ಒಳ್ಳೇ ಲೇಬರ್ ಲೀಡರ್ ಅವ್ರು. ಅಂಡ್ ಕಮುನಿಟಿ ಡಿಸ್ ಅಡ್ವಂಟೇಜ್ ಇರ್ತದೆ. ಬಿಕಾಸ್ ಹಿ ವಾಸ್ ಎ ಕ್ರಿಶ್ಚಿಯನ್. ಬಟ್ ಹಿ ವಾಸ್ ಎ ವೆರಿಗುಡ್ ಲೀಡರ್. ಅವ್ರು ಭಾಳಾ ವರ್ಷ ಟ್ರೇಡ್ ಯೂನಿಯನ್ನಿನ್ಯಾಗ ಇದ್ರು. ಹಿಂದ್ ಮಜ್ದೂರ್ ಪಂಚಾಯ್ತ್‌ಗೆ ಅಧ್ಯಕ್ಷರಾಗಿದ್ರು. ಬಳ್ಳಾರಿಯಲ್ಲಿ ಭಾಳಾ ಹೋರಾಟ ಮಾಡ್ಯಾರ ಅವ್ರು. ಒಳ್ಳೇ ಲೀಡ್ರು. ನಮ್ ಸ್ಟೇಟ್‌ನ ಟಾಪ್‌ಮೋಷ್ಟ ಟ್ರೇಡ್ ಯೂನಿಯನ್ ಲೀಡರ್ ಅವರು.' ಎನ್ನುತ್ತಾರೆ. ಈ ಮಾತು ದಾಸನ್ ಅವರ ವ್ಯಕ್ತಿತ್ವ ಮತ್ತು ಹೋರಾಟದ ಬದುಕಿಗೆ ಕನ್ನಡಿ ಹಿಡಿಯುತ್ತದೆ. ಈಗಲೂ ಬಳ್ಳಾರಿಯ ಹಿರಿಯ ಕಾರ್ಮಿಕರನ್ನು ಬೇಟಿಯಾದರೆ, ಅವರು ಕಾರ್ಮಿಕರ ದೇವರು ಎನ್ನುತ್ತಾ ಅವರೊಳಗೆ ಮಿಂಚಿನ ಸಂಚಾರವಾದಂತೆ ಭಾವುಕರಾಗುತ್ತಾರೆ.

ಕರ್ನಾಟಕದಲ್ಲಿ ಕಾರ್ಮಿಕ ಚಳವಳಿಗೆ ದೊಡ್ಡ ಪರಂಪರೆ ಇದೆ. ಸಮಾಜವಾದಿ ಪಕ್ಷ ಕಾರ್ಮಿಕ ಚಳವಳಿಯನ್ನು ರೂಪಿಸುವುದು ಬಹಳ ಮುಖ್ಯ ಎಂದು ಭಾವಿಸಿತ್ತು. ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಜಾರ್ಜ ಫರ್ನಾಂಡೀಸ್ ಅವರು ಸಮಾಜವಾದಿ ಪಕ್ಷದ ಸಂಗಾತಿಗಳಿಗೆ ಕಾರ್ಮಿಕ ಹೋರಾಟವನ್ನು ರೂಪಿಸಲು ಕರೆ ಕೊಟ್ಟರು. ಈ ಕರೆಯಿಂದಾಗಿ ಕೆಲವು ಸಮಾಜವಾದಿ ಪಕ್ಷದ ಸಂಗಾತಿಗಳು ಕಾರ್ಮಿಕ ಹೋರಾಟವನ್ನು ರೂಪಿಸುವಲ್ಲಿ ಹೆಚ್ಚು ತೊಡಗಿಸಿಕೊಂಡರು. ಕರ್ನಾಟಕದಲ್ಲಿಯೂ ಇದು ತೀವ್ರವಾಗಿ ಬೆಳೆಯಿತು.

ದಾಸನ್ ಲೋಹಿಯಾ ಪ್ರಣೀತ ಸಮಾಜವಾದದಲ್ಲಿ ಹೆಚ್ಚು ನಂಬಿಕೆಯನ್ನು ಇಟ್ಟಿದ್ದರು. ಸಮಾಜವಾದಿ ಸಿದ್ಧಾಂತದ ನಿಜವಾದ ಜೀವಂತಿಕೆ ಇರುವುದು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ನಡೆಸುವ ಹೋರಾಟಗಳಲ್ಲಿ ಎನ್ನುವುದನ್ನು ದಾಸನ್ ಬಲವಾಗಿ ನಂಬಿದ್ದರು. ಹಾಗಾಗಿ ಅವರು ಬಳ್ಳಾರಿಯಲ್ಲಿ ಹತ್ತಕ್ಕೂ ಹೆಚ್ಚು ಕಾರ್ಮಿಕ ಯೂನಿಯನ್‌ಗಳನ್ನು ಸ್ಥಾಪಿಸಿದ್ದರು. ಅದರಲ್ಲಿ ಮುಖ್ಯವಾಗಿ ಹಮಾಲಿಗಳ ಸಂಘ, ಸಕ್ಕರೆ ಕಾರ್ಖಾನೆ ಕಾರ್ಮಿಕರ ಸಂಘ, ಮೈನ್ಸ ಕಾರ್ಮಿಕರ ಸಂಘ, ಪುರಸಭಾ ಕಾರ್ಮಿಕರ ಸಂಘ, ಬೀಡಿ ಕಾರ್ಮಿಕರು, ಆಟೋಮೊಬೈಲ್

ಕಾರ್ಮಿಕರು, ವಿದ್ಯುತ್ ಇಲಾಖೆಯ ಕಾರ್ಮಿಕರ ಸಂಘ ಹೀಗೆ ಅಸಂಘಟಿಕ ಕಾರ್ಮಿಕರಲ್ಲಿ ಸಂಘಟಿತ ಮನೋಭಾವವನ್ನು ಬೆಳೆಸುವಲ್ಲಿ ಬಳ್ಳಾರಿ ಭಾಗದಲ್ಲಿ ದಾಸನ್ ಅವರು ವಹಿಸಿದ ಪಾತ್ರ ದೊಡ್ಡದು. ಈಗಲೂ ಹಿರಿಯ ಕಾರ್ಮಿಕರನ್ನು ಬೇಟಿಯಾಗಿ ಮಾತನಾಡಿಸಿದರೆ ಅವರು ಕಾರ್ಮಿಕರ ದೇವ್ರು ಅಂತೆಲ್ಲಾ ಹೇಳುತ್ತಾರೆ.

ದಾಸನ್ ಅವರು ಸಕ್ಕರೆ ಕಾರ್ಮಿಕರ ಸಂಘಟನೆ ಮಾಡುವಲ್ಲಿ, ಮತ್ತು ಸಕ್ಕರೆ ಕಾರ್ಮಿಕರ ಪರವಾದ ಹೋರಾಟ ರೂಪಿಸುವಲ್ಲಿ ಹೆಚ್ಚು ಕ್ರಿಯಾಶೀಲರಾಗಿದ್ದರು. ದಾಸನ್ ಅಖಿಲ ಭಾರತ ಸಕ್ಕರೆ ಕಾರ್ಮಿಕರ ಫೆಡರೇಷನ್ನಿನ ರಾಷ್ಟ್ರೀಯ ಉಪಾಧ್ಯಕ್ಷರಾಗಿದ್ದರು. ಕರ್ನಾಟಕ ರಾಜ್ಯ ಸಕ್ಕರೆ ಕಾರ್ಖಾನೆ ಸಂಘಗಳ ಒಕ್ಕೂಟಕ್ಕೆ ರಾಜ್ಯಾಧ್ಯಕ್ಷರಾಗಿದ್ದರು. ಹಿಂದ್ ಮಜ್ದೂರ್ ಪಂಚಾಯ್ತ್‌ಗೆ ಅಧ್ಯಕ್ಷರಾಗಿದ್ದರು. ದಾಸನ್ ಅವರಿಗೆ ಕಾರ್ಮಿಕ ಮಂತ್ರಿಯಾಗಲು ಕಾಂಗ್ರೆಸ್ ಪಕ್ಷದಿಂದ ಆಹ್ವಾನ ಬಂದಿತ್ತಂತೆ. ಆದರೆ ಅವರು ಅದನ್ನು ನಿರಾಕರಿಸಿದ್ದಾಗಿ ತಿಳಿಯುತ್ತದೆ. ಇದರ ಖಚಿತ ಮಾಹಿತಿಯು ಸದ್ಯಕ್ಕೆ ಅಲಭ್ಯ.

ಶಾಂತಮ್ಮ ಹೇಳುವಂತೆ ಬಳ್ಳಾರಿಯಲ್ಲಿದ್ದ ಜನತಾ ಪಕ್ಷದ ಕಚೇರಿ ಯಾವಾಗಲೂ ಕಾರ್ಮಿಕರಿಂದ ಗಿಜುಗುಡುತ್ತಿತ್ತಂತೆ, ಹಾಗಾಗಿ ಜನತಾ ಪಕ್ಷದ ಕಾರ್ಯಕರ್ತರು ಇದೇನು ಪಕ್ಷದ ಕಛೇರಿಯೋ ಅಥವಾ ಕಾರ್ಮಿಕರ ಕಛೇರಿಯೋ ಎಂದು ಹಂಗಿಸುತ್ತಿದ್ದರಂತೆ. ಹಾಗಾಗಿ ಜನತಾ ಪಕ್ಷದ ಚರ್ಚೆ ಸಂವಾದಗಳು ರಾಯಲ್ ಹೋಟೆಲಿನಲ್ಲಿ ನಡೆಯುತ್ತಿದ್ದವಂತೆ. ಅಂದರೆ ಪಕ್ಷದ ಕಚೇರಿ ನಿಜಾರ್ಥದಲ್ಲಿ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವ ತಾಣವಾಯಿತು. ಅದು ಪಕ್ಷದ ಕಾರ್ಯಕರ್ತರಿಗೆ ಮುಳುವಾಯಿತು. ಇದನ್ನು ನೋಡಿದರೆ ಸಮಾಜವಾದಿ ಪಕ್ಷದ ಕಾರ್ಯಕರ್ತರಲ್ಲಿಯೂ ಪಕ್ಷದ ಸಾಮಾಜಿಕ ನಿಷ್ಠೆ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ.

ದಾಸನ್ ಅವರ ಕಾರ್ಮಿಕ ಹೋರಾಟ ತುಂಬಾ ಕಾನೂನು ರೀತ್ಯವಾಗಿರುತ್ತಿತ್ತು. ಹಾಗಾಗಿ ಈ ಭಾಗದ ಪ್ಯಾಕ್ಟರಿ ಮಾಲಿಕರು ದಾಸನ್ ಅವರನ್ನು ತುಂಬಾ ಪ್ರೀತಿ ಗೌರವದಿಂದ ಕಾಣುತ್ತಿದ್ದರು. ಯಾವುದೇ ಸಂಗತಿಯಿದ್ದರೂ ಮಾಲಿಕರುಗಳಿಗೆ ಸಾಲೊಮನ್ ನೋಟಿಸ್ ಕಳಿಸುತ್ತಿದ್ದರು. ಆ ನೋಟಿಸ್ ನೋಡಿದಾಕ್ಷಣ ಅವರು ದಿಡೀರನೆ ಆ ಕೇಸು ಮುಂದುವರೆಸದಂತೆ, ಅವರ ಸಮಸ್ಯೆಯನ್ನು ಬಗೆಹರಿಸಲು ಮುಂದಾಗಿ ಸಾಲೊಮನ್ ಅವರ ಕಛೇರಿಗೆ ದಾವಿಸುತ್ತಿದ್ದರು. ಸಾಲೊಮನ್ ಕಾರ್ಮಿಕರ ಬಹಿರಂಗ ಸಭೆಗಳಲ್ಲಿ ತುಂಬಾ ಮೆದುವಾಗಿ ಮಾತನಾಡುತ್ತಿದ್ದರು. ಅವರ ವ್ಯಕ್ತಿತ್ವವನ್ನು ನೋಡಿದರೆ, ಅಥವಾ ಶಾಂತಮ್ಮ ಅವರ ಬಗ್ಗೆ ಹೇಳುವುದನ್ನು ಕೇಳಿದರೆ ಅವರು ಮಾತಿಗಿಂತ ಕೃತಿಗೆ ಹೆಚ್ಚು ಒತ್ತು ಕೊಡುತ್ತಿದ್ದರು. ಹೆಚ್ಚು ಮಾತನಾಡುತ್ತಿದ್ದ ಎಂ.ಪಿ ಪ್ರಕಾಶ್ ಮುಂತಾದವರು ಶಕ್ತಿ ರಾಜಕಾರಣದಲ್ಲಿ ಲಾಭ ಪಡೆಯುತ್ತಾ, ರಾಜಿಯಾಗುತ್ತಾ ಹೋದರು, ಮಾತನಾಡದ ಸಾಲೊಮನ್ ಶಕ್ತಿ ರಾಜಕಾರಣದಿಂದ ಹಿಂದೆ ಉಳಿದರು. ಅಥವಾ ಅವರದು ಹಾಗೆ ರಾಜಿ ಮಾಡಿಕೊಂಡು ತಮ್ಮ ತತ್ವಸಿದ್ಧಾಂತಗಳಿಗೆ ವಿಮುಖವಾಗುವ ವ್ಯಕ್ತಿತ್ವವಾಗಿರಲಿಲ್ಲ. ದಾಸನ್ ಅವರು ಎಂ.ಪಿ ಪ್ರಕಾಶ್ ಅವರ ನಡೆ ಮತ್ತು ಅವರ ರಾಜಕೀಯ ನಿಲುವುಗಳನ್ನು ಇಷ್ಟಪಡುತ್ತಿರಲಿಲ್ಲವಂತೆ, ಕೆಲವೊಮ್ಮೆ ಕಟುವಾಗಿ ವಿರೋಧಿಸುತ್ತಿದ್ದರಂತೆ, ಹಾಗಾಗಿ ಎಂ.ಪಿ.ಪಿ ಸಮಾಜವಾದಿ ಪಕ್ಷದ ಕಛೇರಿಗೆ ಬರುವುದನ್ನು ಕಡಿಮೆ ಮಾಡಿದರು ಎಂದು ಶಾಂತಮ್ಮ ಹೇಳುತ್ತಾರೆ.

### ಬಳ್ಳಾರಿ ಗಾಂಧಿ

ಬಳ್ಳಾರಿಯಲ್ಲಿ ಗಾಂಧಿವಾದಿಗಳ ದೊಡ್ಡ ಪಡೆ ಇತ್ತು. ಮಹಾಬಳೇಶ್ವರಪ್ಪ, ರಂಜಾನ್ ಸಾಬ್, ಮಳೆಬೆನ್ನೂರು, ಯಜಮಾನ ಶಾಂತರುದ್ರಪ್ಪ ಮೊದಲಾದವರು. ಈ ಸಾಲಿಗೆ ಸೇರುವ ಮತ್ತೊಂದು ಹೆಸರು ದಾಸನ್ ಅವರದು. ಅವರನ್ನು ಬಳ್ಳಾರಿಯ ಗಾಂಧಿ ಎಂದು ಕರೆಯುತ್ತಿದ್ದರು. ಅದು ಅವರಿಗೆ ಅನ್ವರ್ಥವೂ ಆಗಿತ್ತು. ಕಾರಣ ಅವರು ಗಾಂಧಿಯಂತೆಯೇ ಸರಳಜೀವಿ. ಎಂದೂ ಅವರು ಹಣ

ಅಧಿಕಾರಕ್ಕಾಗಿ ಆಸೆಪಡಲಿಲ್ಲ. ಅವರು ಗಾಂಧಿಯ ತತ್ವವನ್ನು ಬದುಕಿದವರು. ದಾಸನ್ ಅವರ ಸಹಾಯಕಿಯಾಗಿದ್ದ ಶಾಂತ ಅವರು ಹೇಳುವಂತೆ, ಅವರು ಮತ್ತೆ ಮತ್ತೆ ಗಾಂಧಿಯ ತತ್ವಗಳ ಬಗ್ಗೆ ಮಾತನಾಡುತ್ತಿದ್ದರಂತೆ; ಗಾಂಧಿಯ ಕೃತಿಗಳನ್ನು ಓದುತ್ತಿದ್ದರಂತೆ. ಕಾರ್ಮಿಕ ಹೋರಾಟವನ್ನು ರೂಪಿಸುವಾಗಲೂ ಮುಖ್ಯವಾಗಿ ಗಾಂಧೀಜಿಯವರ ಅಸಹಕಾರ ಚಳವಳಿಯ ತಾತ್ವಿಕತೆಯನ್ನು ಪಾಲಿಸುತ್ತಿದ್ದರಂತೆ.

ದಾಸನ್ ಎಲ್ಲವನ್ನೂ ಕಾನೂನು ರೀತ್ಯವಾಗಿಯೇ ಬಗೆಹರಿಸಿಕೊಳ್ಳಬೇಕೆಂಬ ನಿಲುವಿನಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಬಳ್ಳಾರಿಗೆ ಗಾಂಧಿ ಬಂದಾಗ ಅವರೊಂದಿಗೆ ಒಡನಾಡಿದ್ದರು. ಬಳ್ಳಾರಿಯ ಜನ ದಾಸೆನ್ ಅವರನ್ನು ಗಾಂಧಿ ಎಂದು ಕರೆದದ್ದಕ್ಕೋ ಏನೋ ಅವರು ತಮ್ಮ ಕೊನೆಯುಸಿರೆಳೆದದ್ದೂ ಸಹ ಗಾಂಧಿ ಹುಟ್ಟಿದ ದಿನ, ಅಂದರೆ ಅಕ್ಟೋಬರ್ ೨, ೧೯೯೫. ಆಗ ದಾಸನ್ ಅವರು ಎಂಬತ್ತು ವರ್ಷದ ಸುಧೀರ್ಘ ಹೋರಾಟದ ಬದುಕಿನಿಂದ ವಿರಾಮ ಪಡೆದಿದ್ದರು. ಇಂತಹ ಹೋರಾಟಗಾರನನ್ನು ಬಳ್ಳಾರಿಯ ಜನ ಆತನ ಹುಟ್ಟಿದ ದಿನವನ್ನಾಗಲಿ, ಸಾವಿನ ದಿನವನ್ನಾಗಲಿ ನೆನಪಿಸಿಕೊಂಡ್ಡದ್ದಕ್ಕೆ ಪುರಾವೆಗಳಿಲ್ಲ.

**ಮನೆ ಮರೆತ ದಾಸನ್**

ಈ ಬರಹದ ಮೊದಲಿಗೇ ಹೇಳಿದೆ, ದಾಸನ್ ಅವರ ಮಗ ಚಂದ್ರನ್ ಅವರಲ್ಲಿ ಅಪ್ಪನ ಬಗೆಗಿನ ನೆನಪುಗಳು ಗಾಢವಾಗಿಲ್ಲ. ತುಂಬಾ ತೆಳುವಾಗಿವೆ. ಇದನ್ನು ನೋಡಿದರೆ, ದಾಸನ್ ಮನೆಯೊಂದಿಗೆ ಗಾಢ ಸಂಬಂಧವನ್ನು ಇಟ್ಟುಕೊಂಡಿರಲಿಲ್ಲ ಅನ್ನಿಸುತ್ತದೆ. ಶಾಂತಮ್ಮ ಹೇಳುವಂತೆ, ದಾಸನ್ ಅವರ ಮಡದಿ ಅವರನ್ನು ನಿರಾಸಕ್ತಿಯಿಂದ ನೋಡುತ್ತಿದ್ದರು. ಅದು ಸಹಜವಾಗಿರಬಹುದು. ಕಾರಣ ಮನೆ ನಿರ್ವಹಿಸಬೇಕಾದ ದಾಸನ್ ಹೋರಾಟದ ಗುಂಗಿನಲ್ಲಿ ಮುಳುಗಿದ್ದರು. ಅವರ ಹೋರಾಟದ ಹಾದಿ ಇರುವ ಹಣವನ್ನು ಕರ್ಚುಮಾಡಿಕೊಳ್ಳುವಂತದ್ದೇ ವಿನಃ ಗಳಿಸುವಂತದ್ದಾಗಿರಲಿಲ್ಲ. ಹೀಗೆ ಕಾರ್ಮಿಕರನ್ನು ಮನೆಯ ಮಕ್ಕಳಿಗಿಂತ ಹೆಚ್ಚು ಪ್ರೀತಿಸುವ ಅವರ ಕಾಳಜಿಯಲ್ಲೇ ಸಾಮಾಜಿಕ ಬದ್ಧತೆಯೊಂದು ಕಾಣುತ್ತದೆ. ಆದರೆ ಅದೇ ಹೊತ್ತಿಗೆ ದಾಸನ್ ಮಕ್ಕಳಿಗೆ ಒಳ್ಳೆಯ ತಂದೆಯಾಗುವ, ಹೆಂಡತಿಗೆ ಒಳ್ಳೆಯ ಗಂಡನಾಗುವ ಅವಕಾಶದಿಂದ ವಂಚಿತರಾದಂತೆ ಕಾಣುತ್ತದೆ.

**ಹಳೆ ಕೋಟು, ಬಡಕಲು ದೇಹ**

ದಾಸನ್ ಅವರು ಸದಾ ಅವರ ಮದುವೆಯ ಕೋಟನ್ನು ಹಾಕುತ್ತಿದ್ದರು. ಆ ಮೂಲಕ ಮದುವೆಯ ನೆನಪನ್ನು ಹಸಿರಾಗಿಟ್ಟಿದ್ದರು. ಅದು ಕೊಳೆಯಾಗಿ, ಒಮ್ಮೊಮ್ಮೆ ರಟ್ಟಿನ ಹಾಗಾದರೂ ಅದನ್ನವರು ಬಿಡುತ್ತಿರಲಿಲ್ಲವಂತೆ. ಈಗಲೂ ನಮಗೆ ಸಿಗುವ ಅವರ ಫೋಟೋ ಕೋಟುಹಾಕಿಕೊಂಡ ಭಂಗಿಯದು. ದಿನವಿಡೀ ವಕೀಲಿ ವೃತ್ತಿಯಂತೆ ಕಾನೂನು, ಕಟ್ಲೆಯಲ್ಲಿ ಮುಳುಗಿ ಹೋಗುತ್ತಿದ್ದರಿಂದ ವಕೀಲಿ ವೃತ್ತಿಯ ಸಂಕೇತವಾಗಿಯೂ ಈ ಕೋಟನ್ನು ಅವರು ಬಳಸುತ್ತಿದ್ದಂತೆ ಕಾಣುತ್ತದೆ. ಆ ಕೋಟಿನ ಜತೆ ಎಂಥದೋ ಮೋಹವನ್ನು ಬೆಳೆಸಿಕೊಂಡಿದ್ದರು. ಬೆಳಗ್ಗೆ ಕಚೇರಿಗೆ ಬಂದರೆ, ಕೋಟು ಹಾಕಿಕೊಂಡೇ ಬರುತ್ತಿದ್ದರು. ಬಂದವರು ಗೋಡೆಗೆ ನೇತುಹಾಕುತ್ತಿದ್ದರು. ಆಗ ಅವರ ಬಡಕಲು ದೇಹ ಕಾಣಿಸಿಕೊಳ್ಳುತ್ತಿತ್ತು. ಹೊರಗೆ ಹೊರಟರೆಂದರೆ ಕೋಟು ಮೈಮೇಲೇರುತ್ತಿತ್ತು. ಸಂಡೂರು ಭೂ ಹೋರಾಟದಲ್ಲಿ ಅವರು ಭಾಗಿಯಾಗಿರುವ ಫೋಟೋ ನೋಡಿದರೆ, ಅವರದು ತೀರಾ ಸಣಕಲುದೇಹ. ಈ ಸಣಕಲು ದೇಹಕ್ಕೆ ಕೋಟು ಹೊಂದಿಕೆಯಾಗುತ್ತಿರಲಿಲ್ಲವಾದರೂ ಅವರಿಗೇ ಕೋಟು ಪ್ರಿಯವಾಗಿತ್ತು.

**ನೇರ ನಿಷ್ಠುರ ವ್ಯಕ್ತಿತ್ವ**

ದಾಸನ್ ಅವರು ತುಂಬಾ ನೇರ ಮತ್ತು ನಿಷ್ಠುರಿ ವ್ಯಕ್ತಿಯಾಗಿದ್ದರು. ಅವರು ನಂಬಿದ್ದ ಸಮಾಜವಾದಿ ಸಿದ್ಧಾಂತಗಳಿಗೆ ಎಂದೂ ವಿಮುಖರಾಗಲಿಲ್ಲ. ಹಾಗಾಗಿ ಅವರು ಜೀವಿತದ ಕೊನೆಯತನಕವೂ ಹಣದ ಕೊರತೆಯಲ್ಲೇ ಬದುಕಿದರು. ಅವರ ಹೆಂಡತಿ ಆಸ್ಪತ್ರೆಯೊಂದರಲ್ಲಿ ದಾದಿಯಾಗಿ ಮನೆ ನಿರ್ವಹಿಸುತ್ತಿದ್ದರು. ಸದಾ ತತ್ವ ಸಿದ್ಧಾಂತಗಳಿಗೆ ಬದ್ಧವಾಗಿರುವ ಬದುಕಿನ ಕ್ರಮವನ್ನವರು ರೂಢಿಸಿಕೊಂಡಿದ್ದರು. ಕಾರ್ಮಿಕರು ಕಚೇರಿಗೆ ಬಂದಾಗ, ಕೆಲವರು ಟೀ ಕುಡಿಯಾಕ ಒಂದತ್ತುರ್ಪಾಯಿ ಕೊಡ್ರಿ ಎಂದಾಗ, ದಾಸನ್ ತಮ್ಮ

ಕೋಟಿನಲ್ಲಿ ತಡಕಾಡಿ ಹಣ ಇಲ್ಲದ್ದನ್ನು ನೋಡಿ, ಮುಖ ಸಪ್ಪಗೆ ಮಾಡಿಕೊಂಡು, ತಮ್ಮ ಕಚೇರಿಗೆ ಬಂದ ಯಾರಾದರೂ ವಕೀಲಿ ಸ್ನೇಹಿತರ ಹತ್ತಿರ ಹಣ ಕೊಡಿಸುತ್ತಿದ್ದರಂತೆ. ಇದನ್ನು ನೋಡಿ ಕಾರ್ಖಾನೆ ಮಾಲಿಕರು ಯಾರಾದರೂ ಹಣದ ಆಮಿಷ ತೋರಿಸಿದರೆ ಕೆಂಡಾಮಂಡಲವಾಗುತ್ತಿದ್ದರಂತೆ. ಇದು ದಾಸನ್ ಅವರ ವ್ಯಕ್ತಿತ್ವದ ವೈರುಧ್ಯ.

ದಾಸನ್ ಅವರು ನೇರ ನಿಷ್ಟುರ ವ್ಯಕ್ತಿಯಾಗಿದ್ದಂತೆ, ಅವರು ತುಂಬು ಅಂತಕಃರಣದ ವ್ಯಕ್ತಿಯೂ ಆಗಿದ್ದರು. ಸಹಾಯ ಬೇಡಿಬಂದ ಯಾರನ್ನೂ ನಿರಾಸೆಗೊಳಿಸದೆ ತಮ್ಮ ಕೈಲಾದ ಸಹಾಯ ಮಾಡುತ್ತಿದ್ದರು. ಶಾಂತಮ್ಮ ಅಸಹಾಯಕ ಹುಡುಗಿಯಾಗಿ ಅಚಾನಕ್ ದಾಸನ್ ಅವರ ಕಚೇರಿ ಪ್ರವೇಶಿಸಿದಾಗ, ಆ ಹುಡುಗಿಯನ್ನು ಪ್ರೀತಿಯಿಂದ ಮಾತನಾಡಿಸಿ, ಮನೆಯ ಕಷ್ಟದ ಪರಿಸ್ಥಿತಿ ಕೇಳಿ, ಅವಳಿಗೆ ಹೊಟ್ಟೆತುಂಬಾ ಊಟ ಹಾಕಿ, ನಿನಗೆ ಹಸಿವಾದಾಗಲೆಲ್ಲಾ ನಮ್ಮ ಕಛೇರಿಗೆ ಬಾ ಎಂದರಂತೆ. ನಂತರ ಆ ಹುಡುಗಿಯನ್ನು ತಮ್ಮ ಕಛೇರಿಯಲ್ಲಿ ಸಹಾಯಕ್ಕೆ ಇಟ್ಟುಕೊಂಡು ವೇತನ ನೀಡುತ್ತಿದ್ದರು. ಕಾರ್ಮಿಕರನ್ನೂ ಸಹ ತುಂಬಾ ಪ್ರೀತಿಯಿಂದ ಕಾಣುವ ಗುಣ ದಾಸನ್ ಅವರದಾಗಿತ್ತು.

**ದಾಸನ್ ನೆನಪಿನ ಟ್ರಸ್ಟ್**

ದಾಸನ್ ತೀರಿದ ನಂತರ, ಅವರನ್ನು ನಂಬಿದ್ದ ಕಾರ್ಮಿಕರು ಅವರ ಮಗ ಚಂದ್ರನ್ ಅವರಲ್ಲಿಗೆ ಬಂದು ನೀವು ನಮ್ಮ ಪರವಾದ ಹೋರಾಟದ ನಾಯಕತ್ವವನ್ನು ವಹಿಸಿಕೊಳ್ಳುವಂತೆ ಕೇಳಿಕೊಂಡಿದ್ದಾರೆ. ಹಾಗಾಗಿ ಚಂದ್ರನ್ ಅವರು ಮೊದಲು ಕೆಲವು ಕಾಲ ಕಾರ್ಮಿಕರ ಪರವಾಗಿ ಕೆಲಸ ಮಾಡಿದ್ದಾರೆ. ನಂತರ ನಿರಂತರವಾಗಿ ಇದನ್ನು ನಿಭಾಯಿಸಲಿಕ್ಕಾಗದೆ, ಕಾಲಾನಂತರದಲ್ಲಿ ಕಾರ್ಮಿಕರ ಸಂಪರ್ಕವನ್ನು ಕಡಿದುಕೊಂಡಿದ್ದಾರೆ. ದಾಸನ್ ಅವರ ನೆನಪು ಈಗ ಬಳ್ಳಾರಿಯ ಸಮೀಪದ ಸಿರಿವಾರದ ಬಳಿ ಇರುವ 'ದಾಸನ್ ಸಾಲೊಮನ್ ಮೆಮೋರಿಯಲ್ ಲೆಪ್ರೆಸಿ ಅಂಡ್ ಮೆಡಿಕಲ್ ಫೌಂಡೇಷನ್' ರೂಪದಲ್ಲಿ ಮುಂದುವರೆಯುತ್ತಿದೆ. ಇದನ್ನು ದಾಸನ್ ಅವರ ಮಗ ಚಂದ್ರನ್ ಸಾಲೊಮನ್ ಅವರು ನಡೆಸುತ್ತಿದ್ದಾರೆ. ಇಲ್ಲಿ ಅನಾಥ ಮಕ್ಕಳಿಗೆ ಶಾಲೆ ಮತ್ತು ಹಾಸ್ಟೆಲ್ ಸೌಲಭ್ಯವನ್ನು ಒದಗಿಸಲಾಗಿದೆ. ಹಾಗೆಯೇ ಬಡಜನರಿಗೆ ಉಚಿತವಾಗಿ ವೈದ್ಯಕೀಯ ತಪಾಸಣೆಯನ್ನೂ ಮಾಡಲಾಗುತ್ತಿದೆ. ಇದು ಖಾಸಗಿ ಸಂಸ್ಥೆಗಳಿಂದ ಹಣದ ನೆರವನ್ನು ಪಡೆಯುತ್ತಿದೆ.

ಮುಖ್ಯವಾಗಿ ದಾಸನ್ ಅವರು ನಂಬಿದ್ದ ತಾತ್ವಿಕತೆಗೆ ಈ ಫೌಂಡೇಷನ್ ತಾಳೆಯಾಗುತ್ತಿಲ್ಲ. ಅವರು ಸಮಾಜಿಕ ಕಳಕಳಿ, ಸೇವೆ ಮತ್ತು ಹೋರಾಟಕ್ಕೆ ಹಣ ರೂಪದ ಪ್ರತಿಫಲವನ್ನು ಎಂದೂ ನಿರೀಕ್ಷಿಸಿರಲಿಲ್ಲ. ಹಾಗಾಗಿಯೇ ಅವರೊಬ್ಬ ನಿಷ್ಠಾವಂತ ಹೋರಾಟಗಾರರಾಗಿ ನಮಗೆ ಮುಖ್ಯವಾಗುತ್ತಾರೆ. ಆದರೆ ದಾಸನ್ ನೆನಪಿನ ಫೌಂಡೇಷನ್ ಸಮಾಜ ಸೇವೆಯನ್ನೂ ಲಾಭಕಾರಿಯನ್ನಾಗಿಸಿಕೊಂಡಂತೆ ಕಾಣುತ್ತದೆ.

ಕರ್ನಾಟಕದ ಸಮಾಜವಾದಿ ಚರಿತ್ರೆಯಲ್ಲಿ ದಾಸನ್ ಅವರು ತುಂಬಾ ನಿಷ್ಠಾವಂತ ಕಾರ್ಯಕರ್ತರಾಗಿ ಕಾಣುತ್ತಾರೆ. ಅವರ ಜೀವನದ ವಿವರಗಳನ್ನು ಹುಡುಕುತ್ತಾ ಹೊರಟರೆ, ಸಮಾಜವಾದದ ಹೆಸರಲ್ಲಿ ಈಗಿರುವ ಹಲವು ಸಂಗತಿಗಳ ಪುನರ್ ವ್ಯಾಖ್ಯಾನ ಸಾಧ್ಯವಾಗುತ್ತದೆ. ಅಂತೆಯೇ ಸಮಾಜವಾದಿ ಸೋಗಿನ ವ್ಯಕ್ತಿತ್ವಗಳ ನಿಜ ಬಣ್ಣ ಬಯಲಾಗುತ್ತದೆ. ಹಾಗಾಗಿ ಸಾಲೊಮನ್ ಅವರ ಬಗ್ಗೆ ಇನ್ನೂ ಆಳವಾದ ಅಧ್ಯಯನ ಮತ್ತು ದಾಖಲಾತಿ ಸಾಧ್ಯವಾಗಬೇಕಿದೆ.

—-

*ಮಾಹಿತಿ ನೀಡಿದವರು:*

ಹೆಚ್.ಕೆ. ಶಾಂತ, ಕೋಟೆ ಬಳ್ಳಾರಿ.

ರವಿ ಬೆಳಗೆರೆ, ಬೆಂಗಳೂರು.

ಚಂದ್ರನ್ ಸಾಲೊಮನ್, ಬಳ್ಳಾರಿ.

*ಆಕರ ಗ್ರಂಥಗಳು:*


೧) ಪೀರ್ ಬಾಷಾ.ಬಿ, ೨೦೦೮, ಸಮಾಜವಾದಿ ಸಂದರ್ಶನ ಸಂಪುಟ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨) ಅರುಣ್ ಜೋಳದಕೂಡ್ಲಿಗಿ, ೨೦೦೮, ಸೊಂಡೂರು ಭೂ ಹೋರಾಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩) ಕೆ. ಆರ್. ಕಮಲೇಶ್ (ಸಂ), ೨೦೦೩, ಕರ್ನಾಟಕ ರಾಜಕೀಯ ಚಿಂತನೆ (ಎಸ್.ನಿಜಲಿಂಗಪ್ಪ ಅವರ ಸಂಸ್ಮರಣ ಗ್ರಂಥ) ಎಸ್.ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನ, ಬೆಂಗಳೂರು

೪) ರಹಮತ್ ತರೀಕೆರೆ, ೨೦೦೫, ಲೋಕವಿರೋಧಿಗಳ ಜತೆಯಲ್ಲಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್ ಬೆಂಗಳೂರು


# ವನ್ನೂರ್ ಅಲಿ ಶಂಕರ್ ತಾತನಾದ ಕಥೆ

ಹೊಸಪೇಟೆ ಹತ್ತಿರದ ಕಮಲಾಪುರದಿಂದ ಆರೇಳು ಕಿಲೋಮೀಟರ್ ದೂರದಲ್ಲಿ ಸುಂಕಲಮ್ಮನ ಕೆರೆ ಇದೆ. ಆ ಕೆರೆ ದಡಕ್ಕೆ ಒಂದು ಎಕರೆಯಷ್ಟು ಆಲದ ಮರವಿದೆ. ಅದರ ಬಿಳಲುಗಳಲ್ಲಿಯೇ ಸುಂಕಲಮ್ಮ ದೇವಿ ಕುಳಿತಿದ್ದಾಳೆ. ನೋಡಲು ಮನೋಹರವಾಗಿದೆ. ಇದು ಕನ್ನಡ ವಿಶ್ವವಿದ್ಯಾಲಯಕ್ಕೆ ಸುಮಾರು ಮೂರು ಮೈಲಿ ದೂರ.



ನಾನು ಕಮಲಾಪುರದ ಬೇಡ ನಾಯಕರ ಕೃಷಿಯಲ್ಲಿನ ಬದಲಾವಣೆ ಗುರುತಿಸಲು ಕ್ಷೇತ್ರ ಕಾರ್ಯಕ್ಕೆಂದು ಅವರ ಹೊಲಗಳಲ್ಲಿ ಸುತ್ತಾಡುತ್ತಿದ್ದೆ. ಸುಂಕಲಮ್ಮನ ಕೆರೆಗೆ ಹೋದಾಗ, ಅಲ್ಲಿಗೆ ಸಮೀಪದಲ್ಲಿಯೇ ಶಂಕರತಾತನ ಮಠವಿರುವುದಾಗಿಯೂ, ಅದನ್ನು ವನ್ನೂರಸ್ವಾಮಿ ಪೂಜೆ ಮಾಡುವುದಾಗಿ ಹೇಳಿದರು. ಕುತೂಹಲಗೊಂಡ ನಾನು ಆತನನ್ನು ಮಾತನಾಡಿಸಲೆಂದು ಹೊಲಕ್ಕೆ ಹೋದೆ. ಆತ ತಲೆಗೆ ಟವೆಲ್ ಸುತ್ತಿಕೊಂಡು ಹೊಲದಲ್ಲಿ ಬೇಸಾಯ ಮಾಡುತ್ತಿದ್ದ. ನಾನು ಸೀದ ಶಂಕರತಾತನ ದೇವಸ್ಥಾನದತ್ತ ಹೋಗಿ ಎಲ್ಲವನ್ನೂ ಗಮನಿಸಿದೆ. ಸ್ವಲ್ಪ ಹೊತ್ತಿನ ನಂತರ ವನ್ನೂರ ಸ್ವಾಮಿ ಬೇಸಾಯ ನಿಲ್ಲಿಸಿ ಬಂದರು. ನಾನು ಬಂದ ವಿಷಯ ಕೇಳಿದರು. ನಾನು ಅವರ ವಯಕ್ತಿಕ ಬದುಕಿನ ಬಗ್ಗೆ ವಿಚಾರಿಸುತ್ತಾ, ಶಂಕರ್ ತಾತ ಇಲ್ಲಿಗೆ ಬಂದದ್ದು ಹೇಗೆಂದು ಕೇಳಿದೆ.

ಆತ ನಿಧಾನಕ್ಕೆ ಕಥೆ ಹೇಳತೊಡಗಿದ. ಈತನ ಹೆಸರು ವನ್ನೂರ ಅಲಿ. ಕಮಲಾಪುರದ ಕುಂಟದಲ್ಲಿ ಇವರ ಮನೆ ಇದೆ. ಈತ ಒಮ್ಮೆ ವಡ್ಡರ ಮನೆಗೆ ಮಾತನಾಡಲೆಂದು ಹೋಗಿದ್ದಾನೆ. ಆ ಮನೆಯಲ್ಲಿ ಚಿಕ್ಕ ಹುಡುಗಿಗೆ ದೆವ್ವ ಹಿಡಿದು ಅದನ್ನು ಬಿಡಿಸಲು ಬಳ್ಳಾರಿ ಪಕ್ಕದ ಕುರುಗೋಡಿಡೆ ಹೋಗಿದ್ದರಂತೆ. ಆಗ ಆ ಹುಡುಗಿಯಲ್ಲಿ ದೆವ್ವ ಹೋಗಿ ಶಂಕರ ತಾತ ನೆಲೆಸಿದ್ದನಂತೆ, ಆ ಹುಡುಗಿಯಲ್ಲಿರುವ ಶಂಕರ್ ತಾತ ಅವಳನ್ನು ಬಿಟ್ಟು ಮಾತನಾಡಲೆಂದು ಹೋದ ವನ್ನೂರ್ ಅಲಿ ಮೈಯಲ್ಲಿ ಸೇರಿಕೊಂಡಿದ್ದಾನೆ. ಇದು ತಿಳಿದು ವನ್ನೂರ ಅಲಿ 'ನಾನು ಮುಸ್ಲೀಂ ಇದೀನಿ ನಿನಗೆ ನನ್ನೊಳಗೆ ವಾಸ ಮಾಡಾಕ ಆಗಲ್ಲ ಬಿಟ್ಟು ಹೋಗು' ಅಂದನಂತೆ. ಆಗ ಶಂಕರ್ ತಾತ 'ಇಲ್ಲ ನಾನು ನಿನ್ನಲ್ಲಿ ನೆಲಸಾಕ ಅಂತಾನ ಕುರುಗೋಡಿನಿಂದ ಬಂದೀನಿ, ನಿನ್ನ ಬಿಟ್ಟ ನಾ ಹೋಗಲ್ಲ' ಎಂದು ತಾತ ಹಠ ಹಿಡಿದಿದ್ದಾನೆ. ಆಗ ವನ್ನೂರು ಅಲಿ ಸರಿ ಅಂಗಾದ್ರೆ ಎಲ್ಲಿ ನೆಲೆಸ್ತಿ ಅಂತ ಕೇಳಿದ್ದಾನೆ, ನಿಮ್ಮ ಹೊಲದಾಗ ನೆಲೆಸ್ತೀನಿ ಅಂದಿದ್ದಾನೆ. ಹಾಗೆ ಬಂದು ವನ್ನೂರು ಅಲಿ ಹೊಲದಲ್ಲಿ ನೆಲೆಸಿದ್ದಾನೆ. ಹೀಗೆ ನೆಲೆಸಿ ೧೨ ವರ್ಷಗಳೇ ಕಳೆದಿವೆ. ತಾತ ತನ್ನೊಳಗೆ ನೆಲೆಸಿದ್ದರಿಂದ ವನ್ನೂರು ಅಲಿ ಮದುವೆಯಾಗದೆ ಹಾಗೆ ಉಳಿದಿದ್ದಾರೆ. ಇಲ್ಲಿಗೆ ಹಲವಾರು ಸಮಸ್ಯೆಗಳನ್ನು ಹೊತ್ತು ಭಕ್ತಾದಿಗಳು ಬರುತ್ತಾರಂತೆ. ಊರು ಹೊಲಸು, ಕಾಡು ಸ್ವಚ್ಛ ಹಂಗಾಗಿ ಕಾಡೊಳಗೆ ನೆಲಸ್ತೀನಿ ಅಂದಿದ್ದ ತಾತ ಎಂದು ವನ್ನೂರು ಅಲಿ ಹೇಳುತ್ತಾರೆ.



ಹೀಗೆ ಮುಸ್ಲೀಮನೊಬ್ಬ ತನ್ನದೇ ಹೊಲದಲ್ಲಿ ಹಿಂದೂ ದೇವರ ಗುಡಿ ಕಟ್ಟುವುದು, ಪೂಜೆ ಮಾಡುವುದು, ಪೂರ್ತಿ ವನ್ನೂರಸ್ವಾಮಿಯೇ ಆಗುವುದು ಕಮಲಾಪುರದ ಮುಸ್ಲೀಮರಿಗೆ ಸಹಜವಾಗಿ ಸಹಿಸದ ಸಂಗತಿಯಾಗಿದೆ. ಹಾಗಾಗಿ ಮುಸ್ಲೀಂ ನಾಯಕರುಗಳು ವನ್ನೂರ್ ಅಲಿ ಯೊಂದಿಗೆ ಮಾತಾಡಿ ನೀ ಹೀಗೆ ಮಾಡುತ್ತಿರುವುದು ತಪ್ಪು, ಇದು ನಮ್ಮ ಧರ್ಮಕ್ಕೆ ಅವಮಾನ ಮಾಡಿದಂತೆ ಎಂದು ಹೇಳಿದ್ದಾರೆ. ಇದಕ್ಕೆ 'ಅದೆಂಗ ಧರ್ಮಕ್ಕ ಅವಮಾನ ಮಾಡಿದಂಗಕ್ಕಾತಿ, ಅಲ್ಲಾನು ದೇವರ, ಶಂಕರತಾತನೂ ದೇವರ ನಾ ದೇವರನ್ನ ಪೂಜಿ ಮಾಡಾಕತ್ತೀನಿ ಅಷ್ಟ' ಎಂದಿದ್ದಾನೆ. ಆಗ ಅವರು ನೀ ಪೂಜೆ ಮಾಡದು ಬಿಡಲಿಲ್ಲ ಅಂದ್ರ ಧರ್ಮದಿಂದ ಹೊರಗ ಹಾಕ್ತೀವಿ ಎಂದು ಬೆದರಿಕೆ ಹಾಕಿದ್ದಾರೆ. ಆಗ ವನ್ನೂರ್ ಅಲಿ ಒಂದು ಮಾತನ್ನು ಎಲ್ಲರಲ್ಲಿಯೂ ಕೇಳಿದ್ದಾನೆ, 'ಶಂಕರ್ ತಾತಗೆ ನನ್ನಲ್ಲಿ ನೆಲೆಗೊಳ್ಳಾಕ ಅಂತ ಬಂದು ನೆಲಿಸ್ಯಾನ, ನೀವೆಲ್ಲರೂ ಸೇರಿ ನನ್ನೊಳಗಿನ ತಾತನನ್ನು ಹೊರಗ ಕಳಸ್ರಿ..ನಾ ಇವತ್ತಾ ಪೂಜೆ ಮಾಡದು ಬಿಡ್ತೀನಿ, ಹೊಲದಾಗಿನ ದೇವಸ್ಥಾನನ ಕೆಡವತ್ತೀನಿ' ಎಂದಿದ್ದಾನೆ.



ಒಗಟಿನಂಥಹ ಈ ಸವಾಲನ್ನು ಹೇಗೆ ತೆಗೆದುಕೊಳ್ಳುವುದೋ ಗೊತ್ತಾಗದೆ ಪೇಚಾಡಿ, ಕೊನೆಗೆ ಅವನೊಬ್ಬ ಏನಾದ್ರೂ ಮಾಡ್ಕಳ್ಳಿ ಬಿಡಿ ಅವನ ಪಾಡಿಗೆ ಎಂದು ಸುಮ್ಮನಾಗಿದ್ದಾರೆ. ಈಗ ವನ್ನೂರ ಅಲಿ ತನ್ನನ್ನು ತಾನು ಶಂಕರ್ ತಾತ ಎಂದೇ ಕರೆದುಕೊಳ್ಳುತ್ತಾನೆ. ಆತನೇನು ಯಾವುದೋ ವೇಷ ತೊಟ್ಟು ಸ್ವಾಮಿಯ ಹಾಗೆ ಇರುವುದಿಲ್ಲ. ಬದಲಾಗಿ ಸಾಮಾನ್ಯ ರೈತನ ಹಾಗೆ ಹೊಲದಲ್ಲಿ ದುಡಿಮೆ ಮಾಡಿಕೊಂಡು, ಒಂದಷ್ಟು ಪೂಜೆ ಮಾಡಿಕೊಂಡು ಬಂದ ಭಕ್ತರೊಂದಿಗೆ ಮಾತುಕತೆ ಮಾಡಿಕೊಂಡು ಜೀವನ ನಡೆಸಿದ್ದಾನೆ. ತಾನು ಶಂಕರ್ ತಾತನೊಂದಿಗೆ ಮನುಷ್ಯರ ಜತೆ ಮಾತನಾಡುವಂತೆಯೇ ಮಾತನಾಡುವುದಾಗಿ ಹೇಳುತ್ತಾನೆ.ಹೊಲಕ್ಕೆ ಏನು ಬಿತ್ತಬೇಕು, ಯಾವುದನ್ನು ಮಾಡಬೇಕು ಯಾವುದನ್ನು ಮಾಡಬಾರದು ಎನ್ನುವ ಬಗ್ಗೆ ಶಂಕರ ತಾತನಲ್ಲಿ ಕೇಳಿ ಆತ ಮಾಡು ಅಂದದ್ದನ್ನೆ ಮಾಡುತ್ತಾನಂತೆ. ಒಮ್ಮೊಮ್ಮೆ ತಾತನನ್ನು ಬೈಯುವುದೂ ಇದೆಯಂತೆ.



ಶಂಕರ ತಾತ ಬಳ್ಳಾರಿಯ ಹತ್ತಿರ ಇರುವ ಅಲ್ಲೀಪುರದ ತಾತನ ಶಿಷ್ಯನಂತೆ. ಆತ ಮನುಷ್ಯರಂತೆಯೇ ಬದುಕಿ ತೀರಿದನಂತೆ, ನಂತರ ಆತ ಎಲ್ಲಿ ನೆಲೆಸಬೇಕೆಂದು ಆಸೆಯಾಗುತ್ತದೆಯೋ ಅಲ್ಲಿಗೆ ಹೋಗಿ ನೆಲೆಸುತ್ತಾನಂತೆ, ಆತ ಮಾಂಸಾಹಾರಿ ಅಲ್ಲವಂತೆ, ಆತನಿಗೆ ನಡೆಯುವವರು ಅವರ ನಡೆ ಮುಗಿವವರೆಗೆ ಮಾಂಸಾಹಾರವನ್ನು ಸೇವಿಸುತ್ತಿಲ್ಲವಂತೆ ಇತ್ಯಾದಿ ಕಥೆಗಳಿವೆ.

ಇಂತಹ ಕಥೆಗಳ ಸತ್ಯಾಸತ್ಯತೆ ಏನೇ ಇರಲಿ, ಜನಸಮುದಾಯಗಳು ಧರ್ಮದ ಹಂಗಿಲ್ಲದೆ ಧರ್ಮಾತೀತವಾಗಿ ಜಿಗಿವ ಇಂತಹ ಕಥನಗಳು ನಮ್ಮ ಹಳ್ಳಿಗಳಲ್ಲಿ ಹಲವಾರು. ಇವುಗಳು ನಾವು ನಂಬುವ ಧರ್ಮದ ವ್ಯಾಖ್ಯಾನಗಳ ಹುಸಿತನವನ್ನು ಬಯಲುಗೊಳಿಸುತ್ತವೆ. ಇಲ್ಲಿ ವನ್ನೂರ ಅಲಿ ವನ್ನೂರಸ್ವಾಮಿಯಾಗುವಲ್ಲಿ ದೊಡ್ಡ ಪಲ್ಲಟವೇನು ಸಂಭವಿಸಿಲ್ಲ, ಬದಲಾಗಿ ಅದು ಆತನ ಜೀವನದಲ್ಲಿ ಒಂದು ಸಣ್ಣ ಬದಲಾವಣೆಯಷ್ಟೆ. ಇಂತಹ ಘಟನೆಗಳು ನಮ್ಮ ಕಾಲದ ಧರ್ಮದ ತಿಳುವಳಿಕೆಯನ್ನು ತಿಳಿಗೊಳಿಸಬಲ್ಲವು. ಮೇಲೆ ಹೇಳಿದ ಕಥೆ ತೀರಾ ಮೂಢನಂಬಿಕೆ ಎಂದು ಕಾಣಬಹುದು. ಆದರೆ ಅದರ ಹಿಂದೆ ಕೆಲಸಮಾಡಿದ ಮಾನಸಿಕ ಸ್ಥಿತಿ ಆರೋಗ್ಯವಾಗಿದೆ ಎನ್ನುವುದನ್ನು ಮರೆಯುವಂತಿಲ್ಲ.

# ಸೊಲಬಕ್ಕನವರ ಜಾನಪದ ಪಾರ್ಕ



ಹಾವೇರಿಯಿಂದ ೩೮ ಕಿಲೋಮೀಟರ್, ಹಾಗೂ ಶಿಗ್ಗಾಂವಿಯಿಂದ ೮ ಕಿಲೋಮೀಟರ್ ದೂರವಿರುವ ರಾಷ್ಟ್ರೀಯ ಹೆದ್ದಾರಿ-೪ ರಲ್ಲಿ ಗೊಟಗೋಡಿ ಎನ್ನುವ ಹಳ್ಳಿಯ ಪಕ್ಕ ಉತ್ಸವ್ ರಾಕ್ ಗಾರ್ಡನ್ ಎನ್ನುವ ಜಾನಪದ ಪಾರ್ಕ್ ಇದೆ. ಜನಾಕರ್ಷಕವಾಗಿರುವ ಇದು ಸಾದ್ಯವಾದರೆ ಒಮ್ಮೆ ಭೇಟಿಕೊಡಬಹುದಾದ ಸ್ಥಳ.

ನಾನೊಮ್ಮೆ ಧಾರವಾಡದ ವಿದ್ಯಾವರ್ಧಕ ಸಂಘದ ಕಾರ್ಯಕ್ರಮಕ್ಕೆ ಹೋಗಿದ್ದೆ. ಅಲ್ಲಿ ಕಲಾವಿದರಾದ ಸೊಲಬಕ್ಕನವರ ಮಗಳು ವೇದಾರಾಣಿ ಅವರು ಮಾತಿಗೆ ಸಿಕ್ಕರು. ಅವರು ನನ್ನನ್ನು ಜಾನಪದ ಪಾರ್ಕ್ ನೋಡಲು ಬರುವಂತೆ ಒತ್ತಾಯಿಸಿದರು. ಅವರು ಹಾಗೆ ಕರೆಯಲು ನಾನು ಜಾನಪದ ಸೆಮಿನಾರೊಂದನ್ನು ವಿಶ್ಲೇಷಿಸಿ ಗೌರಿ ಲಂಕೇಶ ಪತ್ರಿಕೆಗೆ ಬರೆದ ಬರಹವೊಂದು ಪ್ರಭಾವ ಕಾರಣವಾಗಿತ್ತು. ನಾನು ಜಾನಪದ ವಿಶ್ವವಿದ್ಯಾಲಯದ ಸ್ಥಳ ಶಿಗ್ಗಾಂವ ಪಕ್ಕದ ಗೊಟಗೋಡಿ ಹತ್ತಿರವೇ ಈ ಪಾರ್ಕು ಇರುವುದರಿಂದ ಎರಡನ್ನೂ ನೋಡಬಹುದೆಂದು ಹೋದೆ. ಪುಣೆಯ ಹೈವೇಗೆ ಹೊಂದಿಕೊಂಡಂತಿದೆ ಈ ರಾಕ್ ಗಾರ್ಡನ್.

ಜಾನಪದ ಕುರಿತು ಓದಿದ, ಜನಪದ ಕಲಾವಿದರೊಂದಿಗೆ ಒಡನಾಡಿದ ನನಗೆ ಜನಪದರ ಬದುಕೇ ಕಲಾಕೃತಿಯಾದದ್ದನ್ನು ನೋಡಲು ಸಿಕ್ಕಿದ್ದು ಇದೇ ಮೊದಲು. ಈ ಪಾರ್ಕನ್ನು ನೋಡಲು ಜನವೋ ಜನ. ಇಷ್ಟೊಂದು ಜನರನ್ನು ಆಕರ್ಷಿಸಲು ಈ ಪಾರ್ಕಿನಲ್ಲಿರುವ ಶಕ್ತಿಯಾದರೂ ಏನು ಎಂದು ನೋಡಿದರೆ, ಅದು ಜನಬದುಕಿನದೇ ಕಲಾಕೃತಿಗಳು ಇಲ್ಲಿ ಜೀವತಳೆದದ್ದು. ಕಳೆದು ಹೋಗುತ್ತಿರುವ ಬದುಕನ್ನು ಹಿಡಿದು ತೋರಿಸುವಂತಿರುವ ಇಲ್ಲಿನ ಕಲಾಕೃತಿಗಳು ನೋಡುಗರೊಳಗೆ ಹೊಸ ಪುಳಕವೊಂದನ್ನು ಹುಟ್ಟಿಸುತ್ತವೆ. ಈ ಪಾರ್ಕ್ನ ಹೆಸರು ರಾಕ್ ಗಾರ್ಡನ್ ಎನ್ನುವ ಇಂಗ್ಲೀಷಿನ ಹೆಸರಾದರೂ, ಇದರ ಪ್ರವೇಶದಲ್ಲಿ ಎರಡು ಬಂಡಿ ಗಾಲಿಗಳನ್ನು ಜೋಡಿಸಿಡಲಾಗಿದೆ. ಒಂದು ಗಾಲಿಯನ್ನು ತೆರೆದರೆ ಒಳಗೆ ಪ್ರವೇಶ ತೆರೆದುಕೊಳ್ಳುತ್ತದೆ. ನಾನು ಹೋದಾಗ ಒಬ್ಬರಿಗೆ ಪ್ರವೇಶ ಧನ ಇಪ್ಪತ್ತು ರೂ.




ಪಾರ್ಕನ್ನು ಪ್ರವೇಶಿಸುತ್ತಿದ್ದಂತೆಯೇ ನೀರ ಕಾರಂಜಿಯ ಸುತ್ತ ಡಾ. ರಾಜಕುಮಾರ್ ಅವರ ವಿವಿಧ ಭಂಗಿಯ ಪ್ರತಿಮೆಗಳಿವೆ. ಅವರ ಪ್ರಮುಖ ಪಾತ್ರಗಳಾದ ಪುರಂದರ ದಾಸ, ಕುರಿ ಕಾಯುವ ಬೀರ, ರೈತ, ಕೂಲಿ ಮುಂತಾದ ಪಾತ್ರ ಜಗತ್ತನ್ನು ಮರುಸೃಷ್ಟಿಸಲಾಗಿದೆ. ಈ ಮೂಲಕ ಪಾರ್ಕ್ ಪ್ರವೇಶಿಸಿದವರಿಗೆ ಡಾ. ರಾಜ್ ಅವರ ಬಗೆಗೆ ಪ್ರೀತಿಯೂ, ಆ ಮೂಲಕ ಕನ್ನಡಾಭಿಮಾನವನ್ನೂ ಹುಟ್ಟಿಸುವಂತಿವೆ. ಇದು ಜಾನಪದ ಜಗತ್ತಿಗೆ ಸಿನಿಮಾ ನಟನೊಬ್ಬ ಕೊಟ್ಟ ಕೊಡುಗೆಯನ್ನೂ ನೆನಪಿಸುವಂತಿವೆ.

ಇಲ್ಲಿ ಎತ್ತನ್ನು ಹೊಡೆಯುತ್ತಾ ಹೊಲ ಉಳುವ ರೈತರಿದ್ದಾರೆ, ಮನೆಮುಂದೆ ಕೂತು ಬದುಕಿನ ಬಗ್ಗೆ ಚಿಂತಿಸುವ ಹೆಣ್ಮಕ್ಕಳಿದ್ದಾರೆ, ಗುಡಿಯೊಂದರಲ್ಲಿ ಪಾಠ ಮಾಡುವ ಮಾಸ್ತರು, ತನ್ಮಯತೆಯಿಂದ ಪಾಠ ಕೇಳುವ ಮಕ್ಕಳಿದ್ದಾರೆ. ಕತ್ತೆಯ ಮೇಲೆ ಬಟ್ಟೆಯ ಗಂಟನ್ನು ಹೇರಿಕೊಂಡು ತಾನೂ ಗಂಟೊಂದನ್ನು ಹೊತ್ತುಕೊಂಡು ನಡೆಯುತ್ತಿರುವ ಅಗಸಗಿತ್ತಿಯೂ, ಇಸ್ತ್ರಿ ಮಾಡುವ ಅಗಸನೂ ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿದ್ದಾರೆ. ಬಳೆ ತೊಡಿಸುವ ಬಳೆಗಾರ, ಬಳೆಗಾರ್ತಿಯೂ ಇದ್ದಾರೆ, ಕೌದಿ ಹೆಣೆವ ಹೆಣ್ಮಕ್ಕಳಿದ್ದಾರೆ, ಕಂಬಳಿ ನೇಯುವ ನೇಕಾರರಿದ್ದಾರೆ, ರಾಗಿ ಬೀಸುತ್ತಿರುವ ಮಹಿಳೆಯರು ಬೀಸುವ ಕಾಯಕದಲ್ಲಿ ಮುಳುಗಿದ್ದಾರೆ, ಕಣದಲ್ಲಿ ಕಾಳು ಹೊಕ್ಕುವ ರೈತರಿದ್ದಾರೆ, ಬುಟ್ಟಿ ಹೆಣೆವವರೂ, ಕಸಬರಿಗೆ ಕಟ್ಟುವವರು, ಬಡಗಿಗಳು, ಕಮ್ಮಾರರು, ದಿನಸಿ ಮಾರುವ ಅಂಗಡಿಯವರು, ಆಡು-ಕುರಿ-ದನ ಕಾಯುವ ಹುಡುಗರು, ತರಾವರಿ ಆಕಳು ಎಮ್ಮೆಗಳು ಹೀಗೆ ಜನಬದುಕಿನ ಲೋಕವನ್ನೇ ಮರುಸೃಷ್ಟಿ ಮಾಡಿದ ನಿಜ ಬದುಕೊಂದು ನೋಡುಗರನ್ನು ದಿಗ್ಭ್ರಮೆಗೊಳಿಸುತ್ತದೆ.



ಇಲ್ಲಿರುವ ದನದ ಕೊಟ್ಟಿಗೆ ನೋಡುಗರನ್ನು ದಿಗ್ಭ್ರಮೆಯಲ್ಲಿ ಮುಳುಗಿಸುತ್ತದೆ. ಕಾರಣ ನಿಜವಾದ ದನಗಳೇ ಕೊಟ್ಟಿಗೆಯಲ್ಲಿ ನಿಂತಿವೆಯೇನೋ ಎನ್ನುವಷ್ಟು ನೈಜವಾಗಿವೆ. ತರಾವರಿ ಹಸುಗಳ ಶಿಲ್ಪಗಳನ್ನು  ತುಂಬಾ ಸೂಕ್ಷ್ಮವಾಗಿ ಗಮನಿಸಿ ಚಿತ್ರಿಸಲಾಗಿದೆ. ಹಸುಗಳ ಮುಖದಲ್ಲಿ ಅವುಗಳ ನರನಾಡಿಗಳು ಸಹ ಎದ್ದು ಕಾಣುತ್ತವೆ. ಈ ಪಾರ್ಕ್ಗೆ ಬಂದ ಕೆಲವರನ್ನು ಮಾತಾಡಿಸಿದಾಗ ಹಲವರು ಈ ದನದ ಕೊಟ್ಟಿಗೆ ಇಷ್ಟವಾದದ್ದನ್ನು ಹೇಳಿಕೊಂಡರು.

ಈ ಕಲಾಕೃತಿಗಳು ತುಂಬಾ ಸೂಕ್ಷ್ಮವಾಗಿವೆ. ಜನವಸತಿಯಲ್ಲಿ ಸಹಜವಾಗಿರುವ ಪ್ರಾಣಿ ಜಗತ್ತನ್ನು ತರಲಾಗಿದೆ. ಹಾಗಾಗಿಯೇ ಇಲ್ಲಿ ಕೋಳಿ ಹುಂಜಗಳು ಸುತ್ತಾಡುವವಂತಿವೆ. ಎಲ್ಲಾ ಜಾತಿಯ ಜನಸಮುದಾಯದ ಕುರುಹುಗಳೂ ಇಲ್ಲಿವೆ. ದನ ಕರುಗಳಂತೂ ಕೊಬ್ಬಿ ತಿವಿಯುತ್ತವೇನೋ ಎಂದು ನೋಡಿದಾಕ್ಷಣ ಹಿಂದಕ್ಕೆ ಸರಿಯುವಂತಹ ಭಾವವನ್ನು ಹೊಮ್ಮಿಸುತ್ತವೆ. ಬಡತನದ ಕುರುಹುಗಳಿವೆ, ಜನರ ಜಿಗುಟುತನದ ಗುರುತುಗಳಿವೆ. ಜನಜೀವನ, ವಿಧಾನದ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಇಲ್ಲಿನ ಕಲಾಕೃತಿಗಳಲ್ಲಿ ಸೆರೆಹಿಡಿಯಲಾಗಿದೆ. ಇದೆಲ್ಲವೂ ನಾವು ಜನಪದರ ಗೀತೆ, ಕಥೆ ಕೇಳಿದ ಅನುಭವಕ್ಕಿಂತ ಬೇರೆಯದೇ ಆದ ಅನುಭವವನ್ನು ಕೊಡುತ್ತದೆ. ಜಾನಪದ ವಸ್ತುಗಳನ್ನಾಧರಿಸಿದ ಮ್ಯೂಜಿಯಂಗಿಂತ ಈ ಜೀವಂತ ಜನರ ಕಲಾಕೃತಿಗಳು ಬೇರೆಯದೇ ಆದ ಲೋಕವೊಂದನ್ನು ತೆರೆದು ತೋರುತ್ತವೆ.

ಇಂದು ಕಲಾಕೃತಿಗಳೆಂದರೆ ರಿಯಲಿಸ್ಟಿಕ್, ಪೋಟ್ರೇಟ್ ಮಾದರಿಗಳು; ತೀರಾ ಸವಕಲಾದ ಹಳೆ ಮಾದರಿಗಳು. ಅಂತಹ ಮಾದರಿಗಳನ್ನು ಮಾಡುವ ಕಲಾವಿದರು ತುಂಬಾ ಸಾಂಪ್ರದಾಯಿಕರು, ಅವರಿಗೆ ಮಾಡ್ರನ್ ಆರ್ಟ್ ಗೊತ್ತಿಲ್ಲದವರು ಎಂದು ಭಾವಿಸಲಾಗುತ್ತದೆ. ಹಾಗಾಗಿ ಕಲಾವಿದರು ಅಬ್ ಸ್ಟ್ರಾಕ್ಟ್ ಮಾಡ್ರನ್ ಆರ್ಟ್, ಇನ್ ಸ್ಟಲೇಷನ್, ಮಾದರಿಗಳಿಗೆ ಮಾರುಹೋಗುತ್ತಾರೆ. ಇಂತಹ ಹೊತ್ತಲ್ಲಿ ಕಲಾಶಾಲೆಯ ಮಾಸ್ತರರಾಗಿದ್ದ ಸೊಲಬಕ್ಕನವರ, ಗ್ರಾಮೀಣ ಸೊಗಡಿನ ರಿಯಲಿಸ್ಟಿಕ್ ಪೋಟ್ರೇಟ್ ಮಾದರಿಯ ಕಲಾಕೃತಿಗಳಿಗೆ ಮಾರುಹೋದದ್ದು ನಿಜಕ್ಕೂ ಅಚ್ಚರಿಯ ಸಂಗತಿ.

ಹಾವೇರಿ ಜಿಲ್ಲೆ ಶಿಗ್ಗಾಂವ ತಾಲೂಕಿನ ಹುಲಸೋಗಿಯವರಾದ ತಿ.ಬಾ ಸೊಲಬಕ್ಕನವರ ಅವರದು ಒಂದು ರೀತಿಯ ಸವಾಲಿನ ಬದುಕು. ಕಾರಂತರು ಯಕ್ಷಗಾನವನ್ನು ಬೆಳೆಸಿದಂತೆ ದೊಡ್ಡಾಟ, ಸಣ್ಣಾಟಗಳನ್ನು ಬೆಳೆಸಬೇಕೆಂದು ಸ್ವತಃ ದೊಡ್ಡಾಟದ ವೇಷ ಧರಿಸಿದವರು. ಶ್ರೀಶೈಲ ಹುದ್ದಾರ ಮುಂತಾದ ಸಮಾನಾಸಕ್ತ ಗೆಳೆಯರನ್ನು ಸೇರಿಸಿಕೊಂಡು ಅವರು ದೊಡ್ಡಾಟಗಳನ್ನು ಸ್ವತಃ ಅಭಿನಯಿಸಿ, ಯುವ ತಂಡಗಳನ್ನು ಕಟ್ಟಿ ಬೇರೆ ಬೇರೆ ಕಡೆ ಹೋಗಿ ಪ್ರದರ್ಶನ ಕೊಟ್ಟು ಸಂಭ್ರಮಿಸಿದರು. ಕಾರಂತರಿಗೆ ಸಿಕ್ಕಂತಹ ಬೆಂಬಲ ಸೊಲಬಕ್ಕನವರಿಗೆ ಸಿಕ್ಕಲಿಲ್ಲ. ಕಾರಣ ಇವರು ದೊಡ್ಡಾಟದ ಹುಚ್ಚಿಗಾಗಿ ಸಾಕಷ್ಟನ್ನು ಕಳೆದುಕೊಳ್ಳಬೇಕಾಗಿ ಬಂತು. ಈ ದಾರಿಯು ಅವರಿಗೆ ಹೂವಿನದಾಗದೆ, ಮುಳ್ಳಿನದಾಗಿತ್ತು. ನಾನು ಅವರೊಂದಿಗೆ ಮೂರು ಗಂಟೆಗಳ ಕಾಲ ಮಾತನಾಡಿದಾಗ ಇಂತಹ ಸಾಹಸದ ಕಥೆಗಳನ್ನು ನೋವಿನಿಂದಲೂ, ವಿಷಾದದಿಂದಲೂ, ತಿಳಿಹಾಸ್ಯ ಬೆರೆಸಿಯೂ ಹೇಳಿಕೊಂಡರು.



ಅವರ ಮಾತಿನಲ್ಲಿ ಜಾನಪದವನ್ನು ಉಳಿಸಬೇಕೆಂದು ಪ್ರಾಮಾಣಿಕವಾಗಿ ದುಡಿದು ಹೈರಾಣಾದ ದಣಿವು ಕಾಣುತ್ತಿತ್ತು. ಹಾಗಾಗಿ ಅವರ ಬದುಕಿನ ಕಥೆಯನ್ನು ಸಂಗ್ರಹಿಸಿ ಪುಸ್ತಕ ಮಾಡುವ ಆಸೆಯನ್ನು ಹೇಳಿಕೊಂಡೆ, ಆದರೆ ಅದಕ್ಕವರು ಉತ್ಸಾಹವನ್ನೇನೂ ತೋರಲಿಲ್ಲ. ಅವರು ಕಲಾವಿದರಾಗಿ ಅಮೂರ್ತ ಕಲಾಕೃತಿಗಳನ್ನು ಮಾಡಿದ್ದರೆ ಒಂದೊಂದು ಕಲಾಕೃತಿಗಳು ಲಕ್ಷಾಂತರ ರೂಗಳಿಗೆ ಮಾರಾಟವಾಗುತ್ತಿದ್ದವು. ಇಂದು ಬಾಂಬೆ, ಕಲ್ಕತ್ತದಲ್ಲೋ ಅವರು ನೆಲೆಸಬಹುದಾಗಿತ್ತು. ಆದರೆ ಅವರು ಇದ್ದ ಕೆಲಸವನ್ನೂ ಬಿಟ್ಟು ತಮ್ಮ ಸ್ವಂತ ಊರಿಗೆ ಹಿಂತಿರುಗಿದಾಗ ಅವರಿಗೆ ಖಚಿತವಾದ ನಿಲುವುಗಳಿದ್ದವು. ಅವರು ತಮ್ಮ ಕಲಾಕೃತಿಗಳು ಯಾರದೋ ಸಿರಿವಂತಿಕೆಯ ತೋರಿಕೆಯ ಸಂಕೇತಗಳಾಗುವ ಬದಲು ಜನರ ಬದುಕಿನ ಅಂಶಗಳು ಅವುಗಳಲ್ಲಿ ಕಾಣಬೇಕು, ಅದನ್ನು ಜನರೇ ನೋಡಿ ಖುಷಿಪಡಬೇಕು ಎಂದು ಕನಸು ಕಂಡರು. ಅದರಂತೆ ಅವರದೇ ಆದ ಕಲಾಕೃತಿಗಳ ಮಾದರಿಯನ್ನು ರೂಪಿಸಿಕೊಂಡರು. ಅದಕ್ಕೆ ಕೆಲ ಆಸಕ್ತ ವಿದ್ಯಾರ್ಥಿಗಳನ್ನು ಸೇರಿಸಿಕೊಂಡರು. ಆ ಕನಸಿನ ಫಲವೇ ಇಂದು ನಾವು ನೋಡುತ್ತಿರುವ ಜಾನಪದ ಜೀವನವನ್ನು ಬಿಂಬಿಸುವ ಪಾರ್ಕ್.

ಈಗ ನೂರಾರು ಜನರು ಜಾನಪದ ಪಾರ್ಕನ್ನು ನೋಡಲು ಬರುತ್ತಾರೆ. ಅದರಲ್ಲಿ ಬಹುಪಾಲು ಜನ ಹಳ್ಳಿಗರೇ ಇರುವುದೊಂದು ವಿಶೇಷ. ಹಾಗೆ ಬಂದ ಜನರನ್ನು ಮಾತನಾಡಿಸಿದಾಗ ತರಾವರಿ ಅಭಿಪ್ರಾಯಗಳು ವ್ಯಕ್ತವಾದವು. ಹಾನಗಲ್ ತಾಲೂಕು ಮೂಳೂರಿನ ಮಲ್ಲಮ್ಮ ಹೇಳುವಂತೆ 'ಇದೆಲ್ಲಾ ಮತ್ಠೋರ್ಗಿತ್ತ್ರಿ. ಇದನ್ನ ಈಗಿನ್ನ ಮಕ್ಳಿಗೆ ತೋರ್‍ಸಾಕ್ರಿ, ಹಿಂದಿನವ್ರು ಎಷ್ಟು ಕಷ್ಟಬಿದ್ದಾರ ಅಂತ ತಿಳಿತಾತ್ರಿ, ಎನ್ನುತ್ತಾರೆ. ಹಾವೇರಿ ತಾಲೂಕಿನ ಮೇವಂಡ್ರಿಯ ಹನುಮಂತಪ್ಪ 'ದನದ ಕೊಟ್ಟಿಗಿ ಬಾಳ ಇಷ್ಟಾತ್ರಿ, ಇನ್ನು ಇಂಪ್ರು ಆಗ್ಬೇಕ್ರಿ, ಹಳೆ ಕಾಲದ್ದು ನೋಡತಕ್ಕದ್ ಬಿಡ್ರಿ, ರೊಟ್ಟಿ ಸುಡಾಡು ಎಲ್ಲಿ ಕಾಣ್ಲಿಲ್ರಿ..ಎಂದರು.

ಸವಣೂರು ತಾಲೂಕಿನ ಎಲುವಿಗಿ ಗ್ರಾಮದ ಶಾಂತಮ್ಮ 'ಹಳೆ ಕಾಲದ ರೈತರು ಎಂಥ ದಂದೆ ಮಾಡ್ತುದ್ರು ಅಂಥದ್ನ ಮಾಡ್ಯಾರ, ಶಿಶುನಾಳ ಶರೀಫಜ್ಜನ್ನ, ಗೋವಿಂದಜ್ಜನ್ನ ಯಾಕ ಮಾಡಿಲ್ರಿ? ಗುಡಿಗೇರಿ ದ್ಯಾಮವ್ವನ್ನ ಮಾಡಬೇಕ್ರಿ, ಅಂದ್ರ ಎಲ್ಲಾ ನೋಡಿದಂಗಕ್ಕಾತಿ ಎನ್ನುತ್ತಾರೆ. ಗ್ರಾಮೀಣ ಭಾಗದ ಜನರು ಈ ಕಲಾಕೃತಿಗಳಲ್ಲಿ ತಮ್ಮ ಬದುಕಿನ ಪ್ರತಿಬಿಂಬವನ್ನು ಕಾಣುತ್ತಾರೆ. ಇದನ್ನು ನೋಡಿದರೆ ಸೊಲಬಕ್ಕನವರ ಅಂದುಕೊಂಡ ಕನಸು ನನಸಾಗುತ್ತಿದೆ ಅನ್ನಿಸಿತು. ಹುಬ್ಬಳ್ಳಿಯ ಇಂಜಿನಿಯರಿಂಗ್ ಓದುವ ಒಂದಷ್ಟು ಹುಡುಗ ಹುಡುಗಿಯರು ಬಂದಿದ್ದರು. ಅವರುಗಳು ಸಾರ್ ಸಿಟಿ ಬೋರ್ ಹೊಡೆದಾಗ ಈ ಪಾರ್ಕ್ಗೆ ಬಂದು ಹೋಗ್ತೀವಿ ಏನೋ ಒಂಥರಾ ಚೇಂಜ್ ಅನ್ಸುತ್ತೆ ಈ ಪಾರ್ಕ್ ಅಂದರು. ಇದು ಯುವಕ ಯುವತಿಯರನ್ನೂ ಆಕರ್ಷಿಸುತ್ತಿದೆ. ಇಲ್ಲಿನ ಕಲಾಕೃತಿಗಳು ಒಣಗಿಸಿಟ್ಟ ದೇಹಗಳಂತೆ ಒಮ್ಮೊಮ್ಮೆ ಭಯ ಹುಟ್ಟಿಸುತ್ತವೆ. ಈ ಕಾರಣಕ್ಕೆ ಮೃತ ದೇಹಗಳನ್ನು ಒಣಗಿಸಿಟ್ಟು ಜೋಡಿಸಿದ್ದಾರೆಯೇನೋ ಎನ್ನುವ ಭಾವ ಉಂಟಾಗುತ್ತದೆ. ಇದು ರೂಪಕವಾಗಿಯೂ, ಮೃತಸ್ಥಿತಿಗೆ ಹೋಗುತ್ತಿರುವ ದೇಸಿ ಬದುಕಿನ ದಾರುಣ ಸ್ಥಿತಿಗೂ ಕನ್ನಡಿ ಹಿಡಿಯುತ್ತದೆ.

ಆಕರ್ಷಕ ಫ್ರೇಮುಗಳಲ್ಲಿ ಕಲಾಕೃತಿಯನ್ನು ರಚಿಸಿ ಬಂಧಿಸಿಡುವ ಮಾದರಿ ವಿರುದ್ಧ ಬಂಡೆದ್ದು ಸೊಲಬಕ್ಕನವರು ಮಾಡಿದ ಪ್ರಯೋಗ ನಿಜಕ್ಕೂ ಚಾರಿತ್ರಿಕವಾಗಿ ಮಹತ್ವದ ಸಂಗತಿ. ಈ ಮಾದರಿಯ ಪ್ರಭಾವವನ್ನು ಇಂದಿನ ಕಲಾ ವಿದ್ಯಾರ್ಥಿಗಳಲ್ಲಿ ಕಾಣುತ್ತಿದ್ದೇವೆ. ಅದೊಂದು ಒಳ್ಳೆಯ ಬೆಳವಣಿಗೆ. ಈ ನಿಟ್ಟಿನಲ್ಲಿ ಸೊಲಬಕ್ಕನವರ ಶ್ರಮ ಎಲ್ಲರೂ ಗೌರವಿಸುವಂಥದ್ದು.